ಸಂಪಾದಕರು: ದರ್ಶನ್.ಟಿ
Editor : DARSHAN.T

# ನಮ್ಮ ಜನ
# NAMMA JANA

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 256
Volume - 01 Issue - 256
ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269
Title- Code: KARKAN 28269
ಚಿತ್ರದುರ್ಗ
Chitradurga
ದಿನಾಂಕ: 01–05–2024 ಬುಧವಾರ
Date: 01-05-2024 Wednesday
ಪುಟ: 4
Page: 4
ಬೆಲೆ : ರೂ.2–00
Price: Rs. 2-00

ಒಳಪುಟದ ಸುದ್ದಿಗಳು
ಕುಡಿತ ಬಿಟ್ಟ 30 ಮಂದಿಗೆ ಸ್ವ–ಉದ್ಯೋಗದಡಿ ಕೃಷಿ ತರಬೇತಿ 2
ಹೊಸದುರ್ಗ: ಪರಾಕಾಷ್ಠೆ ತಲುಪಿದ ಲೋಕಸಭಾ ಬೆಟ್ಟಿಂಗ್ ಸಮರ 3
ಕಾಡುವ ನಾಯಕ ಶ್ರೀನಿವಾಸ ಪ್ರಸಾದ್ –ಸುರೇಶ್ ಕಂಜರ್ಪಣೆ 4

ಸುದ್ದಿ, ಜಾಹಿರಾತಿಗೆ
9686622252

### ಶುಭ ನುಡಿ

ಬಟ್ಟೆ ನೋಡಿ ಗೆಳೆತನ ಮಾಡಬೇಡ,
ಗುಣ ನೋಡಿ ಗೆಳೆತನ ಮಾಡು ,
ಯಾಕೆಂದರೆ ಬಟ್ಟೆ ಹರಿದು ಹೋಗುವ
ತನಕ ಮಾತ್ರ ಇರುತ್ತದೆ, ಗುಣ
ಸಾಯುವವರೆಗೂ ಇರುತ್ತದೆ !!

» ಶುಭೋದಯ

# ಕುಡಿವ ನೀರಿಗಾಗಿ ಕಾಲಿಕೊಡ ಹಿಡಿದು ಓಡಾಡುವ ಮಹಿಳೆಯರು

## ರಾಜ್ಯ ಸರ್ಕಾರ ನಿರ್ಲಕ್ಷ್ಯಕ್ಕೆ ವರವಿನೋರಹಟ್ಟಿ ಗ್ರಾಮಸ್ಥರ ಬೇಸರ

» **ಚಳ್ಳಕೆರೆ**

ತಾಲ್ಲೂಕಿನ ನನ್ನಿವಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವರವಿನೋರಹಟ್ಟಿ ಗ್ರಾಮದಲ್ಲಿ ಕುಡಿಯುವ ನೀರಿನ ಅಭಾವ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಮಹಿಳೆಯರು ಹಗಲುರಾತ್ರಿ ಎನ್ನದೆ ಕೊಡಗಳನ್ನು ಹಿಡಿದು ಗ್ರಾಮದಲ್ಲಿ ಓಡಾಡುತ್ತಾ ಕುಡಿಯುವ ನೀರಿಗಾಗಿ ಪರಿತಪಿಸುತ್ತಿದ್ದಾರೆ.

ಗ್ರಾಮದಗ್ರಾಮಸ್ಥರಾದಪಾಲಮ್ಮ, ಸಣ್ಣಪಾಲಮ್ಮ, ಬೋರಮ್ಮ, ಪಾಲಕ್ಕ, ಬೋರಯ್ಯ, ಓಬಯ್ಯ, ಪಾಲಯ್ಯ ಮುಂತಾದವರು ಗ್ರಾಮದ ಕುಡಿಯುವ ನೀರಿನ ಸಮಸ್ಯೆಯ ನೈಜ ಸ್ಥಿತಿಯ ಬಗ್ಗೆ ಮಾಹಿತಿ ನೀಡಿ, ಗ್ರಾಮದಲ್ಲಿ ಕುಡಿಯುವ ನೀರು ಸರಬರಾಜಿಗೆ



ಸಂಬಂಧಪಟ್ಟಂತೆ ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗಮನಹರಿಸುತ್ತಿಲ್ಲ, ವಿಶೇಷವಾಗಿ ನೀರಗಂಟಿ ವ್ಯವಸ್ಥೆ ಇಲ್ಲ, ತಾಲ್ಲೂಕು ಆಡಳಿತ ಈ ಹಿಂದೆ ಪ್ರತಿದಿನ ಐದು ಟ್ಯಾಂಕ್‌ಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿತ್ತು. ಆದರೆ, ಈಗ ಇಡೀ ದಿನಕ್ಕೆ ಕೇವಲ ಒಂದು ಟ್ಯಾಂಕರ್ ಮಾತ್ರ ಬಂದುಹೋಗುತ್ತದೆ.

ಟ್ಯಾಂಕರ್ ಬಂದಕೂಡಲೇ ನೂರಾರು ಮಹಿಳೆಯರು ಕುಡಿಯುವ ನೀರಿಗೆ ಮುಗಿಬೀಳುತ್ತಾರೆ.

ಮನೆಯಲ್ಲಿ ವೃದ್ದರು, ಮಕ್ಕಳು, ಮಹಿಳೆಯರು ಕುಡಿಯುವ ನೀರಿಲ್ಲದೆ ಪ್ರತಿನಿತ್ಯ ಪರದಾಡುತ್ತಾರೆ. ತಾಲ್ಲೂಕು ಆಡಳಿತ ಈ ಬಗ್ಗೆ ತುರ್ತು ಗಮನಹರಿಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಗ್ರಾಮಸ್ಥರು ಸರ್ಕಾರವನ್ನು ಆಗ್ರಹ ಪಡಿಸಿದ್ದಾರೆ.

## ದ್ವಿತೀಯ ಪಿಯು ಪರೀಕ್ಷೆ–2: 177 ವಿದ್ಯಾರ್ಥಿಗಳು ಗೈರು

» **ಚಿತ್ರದುರ್ಗ**

ಏಪ್ರಿಲ್ 30 ರಂದು ನಡೆದ ದ್ವಿತೀಯ ಪಿಯುಸಿ ಪರೀಕ್ಷೆ–2ಗೆ ಇತಿಹಾಸ ವಿಷಯದಲ್ಲಿ 99 ವಿದ್ಯಾರ್ಥಿಗಳು ಹಾಗೂ ಭೌತಶಾಸ್ತ್ರ ವಿಷಯದಲ್ಲಿ 78 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 177 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಇತಿಹಾಸ ವಿಷಯದ ಪರೀಕ್ಷೆಗೆ 780 ವಿದ್ಯಾರ್ಥಿಗಳು ನೋಂದಣಿಯಾಗಿದ್ದು, 681 ವಿದ್ಯಾರ್ಥಿಗಳು ಹಾಜರಾಗಿ, 99 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಭೌತಶಾಸ್ತ್ರ ವಿಷಯದಲ್ಲಿ 1091 ವಿದ್ಯಾರ್ಥಿಗಳು ನೋಂದಣಿಯಾಗಿದ್ದು, 1031 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ, 78 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಜಿಲ್ಲೆಯ 09 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆದಿದ್ದು, ಯಾವುದೇ ಡಿಬಾರ್ ಪ್ರಕರಣ ಇರುವುದಿಲ್ಲ. ಮೇ 01 ರಂದು ಯಾವುದೇ ಪರೀಕ್ಷೆ ಇರುವುದಿಲ್ಲ. ಮೇ 02ರಂದು ಇಂಗ್ಲಿಷ್ ಪರೀಕ್ಷೆ ಇರುತ್ತದೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.



ಚಿತ್ರದುರ್ಗ ತಾಲೂಕಿನ ಚಿಕ್ಕಪ್ಪನಹಳ್ಳಿ ಗ್ರಾಮದ ಶ್ರೀ ಗುರುಕೊಟ್ರಸ್ವಾಮಿ ರಥೋತ್ಸವ ಮಂಗಳವಾರ ಸಹಸ್ರಾರು ಭಕ್ತಾಧಿಗಳ ನಡುವೆ ವಿಜೃಂಜಣೆಯಿಂದ ನೆರವೇರಿತು.

### ಫಾಸ್ಟ್ ನ್ಯೂಸ್

## ಇಂದು ವಿದ್ಯುತ್ ವ್ಯತ್ಯಯ

» **ಚಿತ್ರದುರ್ಗ**

ಚಿತ್ರದುರ್ಗ ವಿಭಾಗ ವ್ಯಾಪ್ತಿಯಲ್ಲಿರುವ ಪಂಡರಹಳ್ಳಿ ಲೈನ್‌ನ ಟ್ಯಾಪಿಂಗ್ ಪಾಯಿಂಟ್‌ನಿಂದ ಪಂಡರಹಳ್ಳಿ 66/11 ಕೆವಿ ವಿ.ವಿ ಕೇಂದ್ರದವರೆಗೆ ಡ್ರೇಕ್ ಕಂಡಕ್ಟರ್ ಬಳಸಿ ಉದ್ದೇಶಿತ 66 ಕೆವಿ ಲೈನ್ ಮತ್ತು ಕೊಯೊಟ್ ಕಂಡಕ್ಟರ್ ಬಳಸಿ ಹಾಲಿ ಇರುವ 66 ಕೆವಿ ಡಿ.ಸಿ ಲೈನ್‌ನಿಂದ ಮಲ್ಟಿ ಸರ್ಕ್ಯೂಟ್ ಟವರ್ ನಿರ್ಮಾಣ ಮಾಡಲು 66/11 ಕೆವಿ ಪಂಡರಹಳ್ಳಿ ಕೇಂದ್ರದಿಂದ ಹೊರಹೊಮ್ಮುವ ಎಲ್ಲಾ 11 ಕೆವಿ ಮಾರ್ಗ ಮುಕ್ತತೆಯನ್ನು ನೀಡಬೇಕಾಗಿರುವುದರಿಂದ ಮೇ 01 ರಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ವಿದ್ಯುತ್ ಅಡಚಣೆಯಾಗುವ ಮಾರ್ಗಗಳು: ಅನ್ನೇಹಾಳು, ಹುಲ್ಲೂರು, ಪಂಡರಹಳ್ಳಿ, ಜಾನುಕೊಂಡ, ಸಿದ್ದಾಪುರ, ಗೊಡಬನಾಳ್, ಸೊಂಡೆಕೊಳ, ಸಿಂಗಾಪುರ, ಕಕ್ಕೇಹರವು ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಅಡಚಣೆಯಾಗಲಿದೆ. ಗ್ರಾಹಕರು ಸಹಕರಿಸಬೇಕು ಎಂದು ಬೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ಕುಡಿತ ಬಿಟ್ಟ 30 ಮಂದಿಗೆ ಕೃಷಿ ತರಬೇತಿ

» ಚಿತ್ರದುರ್ಗ

ಕುಡಿತ ಬಿಟ್ಟು ಹೊಸ ಜೀವನ ಆರಂಭಿಸ ುತ್ತಿರುವ ನೀವುಗಳು ಸ್ವ-ಉದ್ಯೋಗದ ಮೂಲಕ ಜೀವನ ರೂಪಿಸಿಕೊಳ್ಳಿ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪ್ರಾದೇಶಿಕ ನಿರ್ದೇಶಕಿ ಶ್ರೀಮತಿ ಬಿ.ಗೀತ ಕರೆ ನೀಡಿದರು.


ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್, ರುಡ್‌ಸೆಟ್ ಸಂಸ್ಥೆ ಸಹಯೋಗದೊಂದಿಗೆ ಬಿ.ಜಿ.ಕೆರೆಯ ಡಾ.ವೀರಭದ್ರಪ್ಪನವರ ತೋಟದಲ್ಲಿ 10 ದಿನಗಳ ಕಾಲ ನವ ಜೀವನ ಸದಸ್ಯರಿಗೆ ಏರ್ಪಡಿಸಲಾಗಿದ್ದ ಕುರಿ ಮತ್ತು ಹಸು ಸಾಕಾಣಿಕೆ ತರಬೇತಿ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಮನುಷ್ಯನ ಜೀವನದಲ್ಲಿ ಬದಲಾವಣೆ ಮುಖ್ಯ. ಮದ್ಯಪಾನ ತ್ಯಜಿಸಿದ



ಜಿಲ್ಲೆಯ 30 ಮಂದಿ ನವ ಜೀವನ ಸದಸ್ಯರುಗಳಾಗಿದ್ದೀರ. ಮತ್ತೊಬ್ಬರ ಮೇಲೆ ಅವಲಂಭಿತರಾಗದೆ ಸ್ವಾವಲಂಭಿಯಾಗಿ ಬದುಕುವುದನ್ನು ಕಲಿಯಿರಿ ಎಂದರು. ಡಾ.ವೀರಭದ್ರಪ್ಪ ಮಾತನಾಡಿ ಕುರಿ, ಮೇಕೆ ಸಾಕಾಣಿಕೆಯಿಂದ ಹೆಚ್ಚಿನ ಲಾಭ ಪಡೆದು ಜೀವನ ಮಟ್ಟ ಸುಧಾರಿಸಿಕೊಳ್ಳಬಹುದು. ಕುಡಿತಕ್ಕೆ ಹಣ ಹಾಳು ಮಾಡುವ ಬದಲು ಇಂತಹ ತರಬೇತಿಗಳ ಪ್ರಯೋಜನ ಪಡೆದುಕೊಂಡು ಸಮಾಜದಲ್ಲಿ ಮುಖ್ಯ ವಾಹಿನಿಗೆ ಬನ್ನಿ ಎಂದು ನವ ಜೀವನ ಸದಸ್ಯರಿಗೆ ತಿಳಿಸಿದರು.ಶೆಡ್ ನಿರ್ಮಾಣ, ಅಲ್ಪ ಬಂಡವಾಳದಲ್ಲಿ ಹೆಚ್ಚು ಲಾಭ ಪಡೆಯುವುದು. ಜಾನುವಾರುಗಳಿಗೆ ರೋಗ ಹರಡದಂತೆ ಕಾಲ ಕಾಲಕ್ಕೆ ಲಸಿಕೆ ಮತ್ತು ಔಷಧಿಗಳನ್ನು ಕೊಡುವ ಬಗ್ಗೆ ಮಾಹಿತಿ ನೀಡಿದರು.ರುಡ್‌ಸೆಟ್ ಸಂಸ್ಥೆಯ ಉಪನ್ಯಾಸಕರುಗಳಾದ ಉದಯ್ ಕುಮಾರ್ ಮತ್ತು ತೋಟಪ್ಪ ಇವರುಗಳು ಸ್ವ-ಉದ್ಯೋಗಿಗಳಾಗಬೇಕೆಂದರೆ ಇಂತಹ ತರಬೇತಿಗಳನ್ನು ಪಡೆಯಬೇಕು ಎಂದರು. ರುಡ್‌ಸೆಟ್ ಸಂಸ್ಥೆಯ ನಿರ್ದೇಶಕಿ ಶ್ರೀಮತಿ ರಾಧಮ್ಮ, ಜನಜಾಗೃತಿ ಯೋಜನಾಧಿಕಾರಿ ನಾಗರಾಜ್ ಕುಲಾಲ್, ಆರೋಗ್ಯ ಸಹಾಯಕ ವೆಂಕಟೇಶ್, ಜನಜಾಗೃತಿ ಮೇಲ್ವಿಚಾರಕ ರುದ್ರಪ್ಪ ಇವರುಗಳು ಈ ಸಂದರ್ಭದಲ್ಲಿದ್ದರು.

## ಫಾಸ್ಟ್ ನ್ಯೂಸ್

### ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ 6ನೇ ತರಗತಿ ಪ್ರವೇಶಕ್ಕೆ ಅರ್ಜಿ



» ಚಿತ್ರದುರ್ಗ

2024-25ನೇ ಸಾಲಿಗೆ "ಪ್ರತಿಷ್ಠಿತ ಶಾಲೆಗಳಿಗೆ ಪ್ರತಿಭಾವಂತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು "ಆಯ್ಕೆ ಮಾಡುವ ಕಾರ್ಯಕ್ರಮದಡಿ ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯಲ್ಲಿ 5ನೇ ತರಗತಿಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ 6ನೇ ತರಗತಿಗೆ ಪ್ರವೇಶ ನೀಡಲು ಆನ್‌ಲೈನ್ ಮುಖಾಂತರ ನೊಂದಣಿ ಮಾಡಿಕೊಳ್ಳಲು ಮೇ 9 ರಿಂದ ಮೇ21 ರ ವರೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.ಆನ್‌ಲೈನ್ ನೊಂದಣಿ ಪ್ರಕ್ರಿಯೆಯು ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು ಗ್ರೇಡ್-1&2 ಸಮಾಜ ಕಲ್ಯಾಣ ಇಲಾಖೆಯ ಕಛೇರಿ ಮತ್ತು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಕಛೇರಿಯ ಕಛೇರಿ ವೇಳೆಯಲ್ಲಿ ನೊಂದಣಿ ಮಾಡಲಾಗುವುದು. ಸಂಬಂಧಪಟ್ಟ ಎಲ್ಲಾ ದಾಖಲಾತಿಗಳೊಂದಿಗೆ ಪೋಷಕರು ಸದರಿ ಇಲಾಖಾ ಕಛೇರಿಗಳಲ್ಲಿ ಆನ್‌ಲೈನ್ ಮೂಲಕ ನೊಂದಣಿ ಮಾಡಿಸುವಂತೆ ಸೂಚಿಸಿದೆ. ಮೇ 21 ರ ಕೊನೆಯ ದಿನಾಂಕದ ನಂತರ ಬಂದಂತಹ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

**ಷರತ್ತುಗಳು:** ವಿದ್ಯಾರ್ಥಿಯು ಪರಿಶಿಷ್ಟ ಜಾತಿಗೆ ಸೇರಿದ್ದು, ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷ ಮೀರಿರಬಾರದು. ಪ್ರತಿಭಾವಂತ ವಿದ್ಯಾರ್ಥಿಯಾಗಿರಬೇಕು. 5ನೇ ತರಗತಿಯಲ್ಲಿ ಶೇ.60ರಷ್ಟು ಅಂಕ ಪಡೆದಿರಬೇಕು. ನಿಗಧಿಪಡಿಸಲಾದ ಗುರಿಯಲ್ಲಿ ಬಾಲಕಿಯರಿಗೆ ಶೇ50ರಷ್ಟು ಮೀಸಲಾತಿ ಇರುತ್ತದೆ. ವಿದ್ಯಾರ್ಥಿಗಳು ಪ್ರತಿಷ್ಠಿತ ಶಾಲೆಗಳ ಆಯ್ಕೆ ಕೋರಿ ವಿದ್ಯಾರ್ಥಿಗಳು ಆನ್ ಲೈನ್ ಮೂಲಕವೇ ಅರ್ಜಿ ಸಲ್ಲಿಸತಕ್ಕದ್ದು. ಒಂದೇ ಕುಟುಂಬದಲ್ಲಿ ಇಬ್ಬರಿಗೆ ಒಬ್ಬ ಬಾಲಕ ಮತ್ತು ಒಬ್ಬ ಬಾಲಕಿ, ಬಾಲಕ ಇಲ್ಲದಿದ್ದಲ್ಲಿ ಇಬ್ಬರು ಬಾಲಕಿಯರಿಗೂ ಅಥವಾ ಬಾಲಿ ಇಲ್ಲದಿದ್ದಲ್ಲಿ ಇಬ್ಬರು ಬಾಲಕರಿಗೆ ಪ್ರವೇಶಾವಕಾಶ ಕಲ್ಪಿಸಲಾಗುವುದು. 5ನೇ ತರಗತಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸುವುದು. ಪೋಷಕರು ನಿಗಧಿತ ಅರ್ಜಿಯೊಂದಿಗೆ 04 ಪಾಸ್ ಪೋರ್ಟ್ ಸೈಜ್ ಭಾವಚಿತ್ರ, 5ನೇ ತರಗತಿಯ ಅಂಕಪಟ್ಟಿ (progress card) ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್. ಇತ್ಯಾದಿ ಅಗತ್ಯ ನಕಲು ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಜಗದೇಶ್ ಹೆಬ್ಬಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಲೋಕಸಭಾ ಚುನಾವಣೆ: ಚಿತ್ರದುರ್ಗ ಜಿಲ್ಲೆಯ ಗಡಿಭಾಗದಲ್ಲಿ ಮದ್ಯ ಮಾರಾಟ ನಿಷೇಧ

» ಚಿತ್ರದುರ್ಗ

ಮೇ 7ರಂದು ದಾವಣಗೆರೆ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಮತದಾನ ನಡೆಯಲಿರುವುದರಿಂದ ಲೋಕಸಭಾ ಸಾರ್ವತ್ರಿಕ ಚುನಾವಣೆ-2024ರ ಸಂಬಂಧ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಹಿತದೃಷ್ಠಿಯಿಂದ ಮೇ 05 ರ ಸಂಜೆ 6 ಗಂಟೆಯಿಂದ ಮೇ 7ರ ಮಧ್ಯರಾತ್ರಿ 12ರ ವರೆಗೆ ಚಿತ್ರದುರ್ಗ ಜಿಲ್ಲೆಯ ಗಡಿಭಾಗಕ್ಕೆ ಹೊಂದಿಕೊಂಡಿರುವ 5 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಗೆಯ ಮದ್ಯದ ಅಂಗಡಿಗಳನ್ನು ಮುಚ್ಚುವಂತೆ ಹಾಗೂ ಯಾವುದೇ ತರಹದ ಬಾರ್ ಅಂಡ್ ರೆಸ್ಟೋರೆಂಟ್, ಕ್ಲಬ್ ಮತ್ತು ಹೋಟೆಲ್, ಡಾಬಾಗಳಲ್ಲಿ ಮದ್ಯ ಸಾಗಾಣಿಕೆ, ಶೇಖರಣೆ ಮತ್ತು ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ, ಜಿಲ್ಲಾ ದಂಡಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಟಿ.ವೆಂಕಟೇಶ್ ಆದೇಶಿಸಿದ್ದಾರೆ. ಲೋಕಸಭಾ ಸಾರ್ವತ್ರಿಕ ಚುನಾವಣೆ-2024ರ ಸಂಬಂಧ ದಾವಣಗೆರೆ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಮೇ 07ರಂದು ಮತದಾನ ನಡೆಯಲಿರುವುದರಿಂದ ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯಲ್ಲಿನ ದಾವಣಗೆರೆ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಗಡಿಭಾಗದಲ್ಲಿರುವ ಹೊಳಲ್ಕೆರೆ, ಚಳ್ಳಕೆರೆ, ಚಿತ್ರದುರ್ಗ ಮತ್ತು ಮೊಳಕಾಲ್ಮುರು ತಾಲ್ಲೂಕು ಗಡಿ ವ್ಯಾಪ್ತಿಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಪ್ರಜಾ ಪ್ರತಿನಿಧಿ ಕಾಯ್ದೆ 1951ರ ಸೆಕ್ಷನ್ 135(ಸಿ) ಹಾಗೂ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮ 1967ರ ಅಧಿನಿಯಮ 10 (ಬಿ) ಪ್ರಕಾರ ಮೇ 5 ರ ಸಂಜೆ 6 ಗಂಟೆಯಿಂದ ಮೇ 7ರ ಮಧ್ಯರಾತ್ರಿ 12 ಗಂಟೆಯವರೆಗೆ ಹೊಳಲ್ಕೆರೆ, ಚಳ್ಳಕೆರೆ, ಚಿತ್ರದುರ್ಗ ಮತ್ತು ಮೊಳಕಾಲ್ಮುರು ತಾಲ್ಲೂಕು ಗಡಿಭಾಗಕ್ಕೆ ಹೊಂದಿಕೊಂಡಿರುವ 5 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಗೆಯ ಮದ್ಯದ ಅಂಗಡಿಗಳನ್ನು ಮುಚ್ಚುವಂತೆ ಹಾಗೂ ಯಾವುದೇ ತರಹದ ಬಾರ್ ಅಂಡ್ ರೆಸ್ಟೋರೆಂಟ್, ಕ್ಲಬ್ ಮತ್ತು ಹೋಟೆಲ್, ಡಾಬಾಗಳಲ್ಲಿ ಮದ್ಯ ಸಾಗಾಣಿಕೆ, ಶೇಖರಣೆ ಮತ್ತು ಮದ್ಯ ಮಾರಾಟ ಮಾಡುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿ, ಜಿಲ್ಲಾ ದಂಡಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಟಿ.ವೆಂಕಟೇಶ್ ಆದೇಶ ಹೊರಡಿಸಿದ್ದಾರೆ.

## 142 ಹಜ್ ಯಾತ್ರಾರ್ಥಿಗಳಿಗೆ ಲಸಿಕಾ ಕಾರ್ಡ್ ವಿತರಣೆ

» ಚಿತ್ರದುರ್ಗ

ಚಿತ್ರದುರ್ಗ ನಗರದ ಎಂ.ಕೆ.ಪ್ಯಾಲೇಸ್ ಸಭಾಂಗಣದಲ್ಲಿ ಮಂಗಳವಾರ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ ನಿರ್ದೇಶನದಂತೆ ಜಿಲ್ಲೆಯ ಒಟ್ಟು 142 ಹಜ್ ಯಾತ್ರಾರ್ಥಿಗಳಿಗೆ ಸುರಕ್ಷಾ ಲಸಿಕಾ ಅಭಿಯಾನ ನಡೆಸಲಾಯಿತು.

ಈ ವೇಳೆ ಮಾತನಾಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಜಿ.ಪಿ.ರೇಣುಪ್ರಸಾದ್, ಸರ್ಕಾರದ ಮಾರ್ಗಸೂಚಿಯಂತೆ ಜಿಲ್ಲೆಯ ಒಟ್ಟು 142 ಯಾತ್ರಾರ್ಥಿಗಳಿಗೆ ಸುರಕ್ಷಾ ಲಸಿಕೆ ಹಾಗೂ ಸಾಮಾನ್ಯ ಆರೋಗ್ಯ ತಪಾಸಣೆ ಮಾಡಲಾಗುತ್ತಿದ್ದು, ಇದರ ಉಪಯೋಗ ಪಡೆದುಕೊಳ್ಳಿ ಎಂದು ಹೇಳಿದರು. ಜಾಗತಿಕ ತಾಪಮಾನ ಹೆಚ್ಚಾಗಿರುವುದರಿಂದ ಬಿಸಿಲಾಘಾತ ಘಟನೆಗಳು ಸಂಭವಿಸದಂತೆ ದೇಹವನ್ನು ನಿರ್ಜಲೀಕರಣವಾಗದಂತೆ, ಪದೇ ಪದೇ ನೀರು ಕುಡಿಯುವುದು, ನೆರಳಿನ ವಾತಾವರಣದಲ್ಲಿ ಇರುವುದು, ದ್ರವರೂಪ ಆಹಾರ ಸೇವನೆ ಮಾಡುವುದು, ಮಜ್ಜಿಗೆ, ಎಳನೀರು, ನಿಂಬೆ ಹಣ್ಣಿನ ಪಾನಕ ಸೇವಿಸುವುದು ಒಳ್ಳೆಯದು ಎಂದರು. ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಅಭಿನವ್ ಮಾತನಾಡಿ, ಮೆನಂಜೋ



ಕಾಕಲ್ ಮೆನಂಜೈಟೀಸ್ ರೋಗದ ವಿರುದ್ಧ, ಇನ್ಫ್ಲೂಯಂಜಾ ಮತ್ತು ಓರಲ್ ಪೋಲಿಯೊ ಲಸಿಕೆ ಈ ದಿನ ಎಲ್ಲಾ ಯಾತ್ರಾರ್ಥಿಗಳಿಗೆ ನೀಡಲಾಗುತ್ತಿದೆ.ಇದರ ಜೊತೆ ಲಸಿಕಾ ದೃಢೀಕರಣ ಪತ್ರ ಎಲ್ಲರಿಗೂ ನೀಡಲಾಗುತ್ತಿದೆ. ನಿಮ್ಮ ಯಾತ್ರೆ ಪ್ರಯಾಣ ಸುಖಕರವಾಗಿರಲಿ. ಲಸಿಕಾ ದೃಢೀಕರಣ ಸುರಕ್ಷಿತವಾಗಿ ಇಟ್ಟುಕೊಳ್ಳಿ ಎಂದರು. ಕಾರ್ಯಕ್ರಮದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಬಿ.ವಿ.ಗಿರೀಶ್, ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಎನ್.ಎಸ್.ಮಂಜುನಾಥ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಿ.ಜಾನಕಿ, ಆರೋಗ್ಯ ನಿರೀಕ್ಷಣಾಧಿಕಾರಿ ಗಂಗಾಧರ್, ಗೋಪಾಲಕೃಷ್ಣ, ಡಾ.ರಾಹುಲ್, ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿ ಅರುಂಧತಿ, ಆಶಾ ಕಾರ್ಯಕರ್ತೆಯರು. ಕರ್ನಾಟಕ ರಾಜ್ಯ ಹಜ್ ಸಮಿತಿ ಸಿಬ್ಬಂದಿ ಜಿ.ಕರೀಮುಲ್ಲಾ, ಜಿಲ್ಲಾ ಲಸಿಕಾ ವ್ಯವಸ್ಥಾಪಕ ವಿರೇಶ್ ಸೇರಿದಂತೆ ಜಿಲ್ಲೆಯ ವಿವಿಧ ಮಸೀದಿಗಳ ಮುಖ್ಯಸ್ಥರು ಭಾಗವಹಿಸಿದ್ದರು.

## ಮಕ್ಕಳಿಲ್ಲದ ದಂಪತಿಗಳಿಗೆ ದತ್ತು ಭಾಗ್ಯ, ದತ್ತು ನೀಡಿದ ಜಿಲ್ಲಾಧಿಕಾರಿ ಡಾ; ವೆಂಕಟೇಶ್ ಎಂ.ವಿ

ದಾವಣಗೆರೆ: ಕುಟುಂಬದಲ್ಲಿ ತಂದೆ, ತಾಯಿ, ಮಕ್ಕಳಿದ್ದರೆ ಅದೇನೋ ಚಂದದ ಮನೆಯಂತೆ ಕಾಣುತ್ತದೆ. ಅನೇಕರ ದಾಂಪತ್ಯದಲ್ಲಿ ಮಕ್ಕಳ ಫಲವಿಲ್ಲದೇ ಜೀವನದ ನಿರುತ್ಸಾಹ, ನಿರಾಸೆ ಭಾವನೆಯಿಂದ ದಿನಗಳನ್ನು ಸಾಗಿಸುತ್ತಾರೆ. ಕಳೆದ 16 ವರ್ಷಗಳಿಂದ ಮಕ್ಕಳಿಲ್ಲದೆ ನಿರಾಸೆಯಾಗಿದ್ದ ಬಳ್ಳಾರಿ ಮೂಲದ ದಂಪತಿಗಳು ಸರ್ಕಾರದಿಂದ 4 ತಿಂಗಳ ಗಂಡು ಮಗುವನ್ನು ದತ್ತು ಪಡೆದಿದ್ದಾರೆ. ದಾವಣಗೆರೆ ಜಿಲ್ಲಾ ದತ್ತು ಸ್ವೀಕಾರ ಕೇಂದ್ರದಿಂದ ಬಳ್ಳಾರಿ ಮೂಲದ ದಂಪತಿಗಳು ಸೋಮವಾರ ಮಗುವನ್ನು ದತ್ತು ಪಡೆದಿದ್ದು ಜಿಲ್ಲಾಧಿಕಾರಿ ಡಾ; ವೆಂಕಟೇಶ್ ಎಂ.ವಿ ಅವರು ಮಗುವನ್ನು ದತ್ತು ನೀಡಿದರು. ಮಕ್ಕಳಿಲ್ಲದವರು ಮತ್ತು ಮಕ್ಕಳನ್ನು ಸಾಕಲು ಸಾಕಬಯಸುವ ಪೋಷಕರು ಮಕ್ಕಳನ್ನು ದತ್ತು ಪಡೆಯಲು ಅವಕಾಶ ಇರುತ್ತದೆ. ಪ್ರತಿಯೊಂದು ಜಿಲ್ಲೆಯಲ್ಲಿ ದತ್ತು ಸ್ವೀಕಾರ ಕೇಂದ್ರಗಳಿರುತ್ತವೆ. ಅನಾಥವಾಗಿರುವ ಮಗು, ಮಗು ಬೇಡವಾದ ದಂಪತಿಗಳಿಂದ ಮಗು ಸ್ವೀಕಾರ, ಮಗು ಪೋಷಣೆ ಮಾಡಲು ಸಾಧ್ಯವಾಗದವರಿಂದ ಮಗುವನ್ನು ಈ ಕೇಂದ್ರದಲ್ಲಿ ಪಡೆಯಲಾಗುತ್ತದೆ. ಈ ಮಗುವನ್ನು ಇಲ್ಲಿ ಪಾಲನೆ ಪೋಷಣೆ ಮಾಡಿ ಮಗುವಿಗೆ ಬೇಕಾದ ಎಲ್ಲಾ ವ್ಯವಸ್ಥೆಯನ್ನು ಸರ್ಕಾರದಿಂದ ಕಲ್ಪಿಸಿ ಮಗುವನ್ನು ಪಾಲನೆ, ಪೋಷಣೆ ಮಾಡಲಾಗುತ್ತದೆ. ದತ್ತು ಸ್ವೀಕಾರದಲ್ಲಿನ ಮಗುವನ್ನು ಬೇರೆ ಪೋಷಕರು ದತ್ತು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ನಿಯಮಗಳಿರುತ್ತವೆ. ಮಗು ಬೇಕಾದವರು ಸೆಂಟ್ರಲ್ ಅಡಾಪ್ಷನ್ ರಿಸೋರ್ಸ್ ಅಥಾರಿಟಿ ಮತ್ತು ಸ್ಟೇಟ್ ಅಡಾಪ್ಷನ್ ರಿಸೋರ್ಸ್ ಅಥಾರಿಟಿ ವೆಬ್‌ಸೈಟ್‌ನಲ್ಲಿ ನೊಂದಣಿ ಮಾಡಿಸಬೇಕು. ಮಕ್ಕಳಿಲ್ಲದ ಪೋಷಕರು ಮಗು ದತ್ತು ಪಡೆಯಲು ನೊಂದಣಿ ನಂತರ ದಂಪತಿಗಳಿಬ್ಬರ ವಯೋಮಾನದ ಆಧಾರದ ಮೇಲೆ ಯಾವ ವಯಸ್ಸಿನ ಮಗು ದತ್ತು ಪಡೆಯಬಹುದೆಂದು ಮ್ಯಾಚ್ ಮಾಡಲಾಗುತ್ತದೆ. ಅವರ ವಯೋಮಾನ ಮತ್ತು ಷರತ್ತುಗಳನ್ನು ಪೂರೈಸಿದ ಪೋಷಕರಿಗೆ ಮಗು ದತ್ತು ನೀಡಲು ಪ್ರಕ್ರಿಯೆ ಪ್ರಾರಂಭಿಸಲಾಗುತ್ತದೆ. ಇಂದು ದತ್ತು ಪಡೆದ ದಂಪತಿಗಳು ವಿವಾಹವಾಗಿ 16 ವರ್ಷಗಳಿಂದ ಮಕ್ಕಳಿರಲಿಲ್ಲ, ಇವರು ಸುಮಾರು 40-45 ವರ್ಷದ ವಯೋಮಾನದ ಪೋಷಕರಾಗಿರುವರು. ಇವರಿಗೆ ನಾಲ್ಕು ತಿಂಗಳ ಮಗು ಮ್ಯಾಚ್ ಆಗಿದ್ದರಿಂದ ದತ್ತು ನೀಡಲಾಗಿದೆ. ಇವರು ಕಳೆದ 3 ವರ್ಷಗಳಿಂದ ನೊಂದಣಿ ಮಾಡಿಸಿ ದತ್ತು ಪಡೆಯಲು ಕಾಯುತ್ತಿದ್ದರು. ಪೋಷಕರು ದತ್ತು ಸ್ವೀಕರಿಸಿದ ವೇಳೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕವಿತಾ.ಟಿ, ಮಕ್ಕಳ ರಕ್ಷಣಾಧಿಕಾರಿ ಚಂದ್ರಶೇಖರ್, ಅಧೀಕ್ಷಕರಾದ ಲತಾ ಉಪಸ್ಥಿತರಿದ್ದರು.

## ನಿಂತಿದ್ದ ಲಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ಕಾರು: ಗುಲ್ಬರ್ಗ ಮೂಲದ ಮೂವರಿಗೆ ಪೆಟ್ಟು





» ಚಳ್ಳಕೆರೆ

ತಾಲ್ಲೂಕಿನ ತಳಕು ಪೊಲೀಸ್ ಠಾಣಾ ವ್ಯಾಪ್ತಿಯ ಹಿರೇಹಳ್ಳಿ ಬಳಿ ನಿಂತಿದ್ದ ಲಾರಿಗೆ ಕಾರೊಂದು ಹಿಂಬದಿಯಿಂದ ರಭಸವಾಗಿ ಡಿಕ್ಕಿ ಹೊಡೆದ ಪರಿಣಾಮವಾಗಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಗುಲ್ಬರ್ಗ ಮೂಲದ ಮೂವರಿಗೆ ತೀರ್ವಪೆಟ್ಟಾಗಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಪಘಾತಕ್ಕೀಡಾದ ಕಾರು ಗುಲ್ಬರ್ಗದಿಂದ ಬೆಂಗಳೂರಿಗೆ ಏ.29ರಂದು ಸಂಜೆ ಹೊರಟ್ಟಿದ್ದು, ಏ. 30ರ ಮಂಗಳವಾರ ಬೆಳಗಿನ ಜಾವ ತಳಕು ಠಾಣಾ ವ್ಯಾಪ್ತಿಯ ಬಿ.ಜಿ.ಕೆರೆ, ಹಿರೇಹಳ್ಳಿ ರಾಷ್ಟ್ರೀಯ ಹೆದ್ದಾರಿ (150ಎ) ನಲ್ಲಿ ಯಾವುದೇ ಮುನ್ಸೂಚನೆ ನೀಡದೆ, ಇಂಡಿಕೇಟರ್ ಹಾಕದೆ ಲಾರಿಯೊಂದು ನಿಂತಿದ್ದು, ಕಾರಿನ ಚಾಲಕ ಬಂಡೆಪ್ಪ ಬಸವಣ್ಣೆಪ್ಪ ಬಿರಾದಾರ್ ಡಿಕ್ಕಿಪಡಿಸಿದ್ದು,ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಹುಮ್ನಾಬಾದ್ ಮೂಲಕ ಅರುಣ್‌ಕುಮಾರ್, ನಾಗಮ್ಮ, ಕಾರುಚಾಲಕ್ಕೆ ಬಂಡೆಪ್ಪ ಬಸವಣ್ಣೆಪ್ಪ ಬಿರಾದಾರ್ ಗಾಯಗೊಂಡಿರುತ್ತಾರೆ.

ಅಪಘಾತಕ್ಕೆ ಕಾರಣವಾದ ಲಾರಿಚಾಲಕ ವಿರುದ್ದ ರಂಗಸ್ವಾಮಿ ವಿರುದ್ದ ಗಾಯಾಳುಗಳ ಸಂಬಂಧಿ ಸುನೀಲ್ ದೂರು ನೀಡಿದ್ದು, ತಳಕು ಠಾಣಾಧಿಕಾರಿ ಎನ್.ಕೆ.ಅಜ್ಜಯ್ಯ ಪ್ರಕರಣ ದಾಖಲಿಸಿದ್ದಾರೆ.

## ನಿಜಲಿಂಗಪ್ಪ ಶಿಕ್ಷಣ ಸಂಸ್ಥೆಯ ಸಾಧನೆ



ಹೊಸದುರ್ಗ: ಪಟ್ಟಣದ ಎಸ್.ನಿಜಲಿಂಗಪ್ಪ ಶಿಕ್ಷಣ ಸಂಸ್ಥೆಯ ಪದವಿ ಪೂರ್ವ ಕಾಲೇಜಿನ ನಾಲ್ವರು ವಿದ್ಯಾರ್ಥಿಗಳು ಜೆಇಇ ಅಡ್ವಾನ್ಸ್ ಪರೀಕ್ಷೆಗೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿನಿ ಶಾರದಾ ಎಲ್, 552 ನೇ ರ್‍ಯಾಂಕ್ ಪಡೆದಿದ್ದು ವಿದ್ಯಾರ್ಥಿಗಳಾದ ಪ್ರತೀಕ್ಷಾ ಎಚ್, ಲವಕುಮಾರ್ ಹಾಗೂ ಬಾಲಾಜಿ ಜೆಇಇ ಮೇನ್ಸ್ ಪರೀಕ್ಷೆಗೆ ಅರ್ಹತೆ ಪಡೆದಿದ್ದಾರೆ ಎಂದು ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಕೆ.ಎಸ್. ಕಲ್ಮಠ್ ತಿಳಿಸಿದ್ದು ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷ ಎಂ.ಶಿವಲಿಂಗಪ್ಪ,ಅಕಾಡಮಿ ನಿರ್ದೇಶಕ ಎಂ.ಬಿ.ತಿಪ್ಪೇಸ್ವಾಮಿ ಸೇರಿದಂತೆ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಉಪನ್ಯಾಸಕ ವರ್ಗದವರು ಅಭಿನಂದಿಸಿದ್ದಾರೆ.

**ಪ್ರಮುಖ ಸುದ್ದಿ**

# ಉತ್ತಮ ಮಳೆ, ಬೆಳೆಗಾಗಿ ಪ್ರಾರ್ಥಿಸಿ ನಗರದ ರಸ್ತೆಗಳಲ್ಲಿ ಗ್ರಾಮ ದೇವತೆಗಳಾದ ಚಳ್ಳಕೆರೆಯಮ್ಮ, ಉಡಸಲಮ್ಮ ಮೆರವಣಿಗೆ

» ಚಳ್ಳಕೆರೆ

ಶಾಂತಿನಗರನಿವಾಸಿಗಳುಹಾಗೂವಿಶ್ವಕರ್ಮ ಸಮಾಜದ ಬಂಧುಗಳು ಮೆರವಣಿಗೆಯಲ್ಲಿ ಭಾಗವಹಿಸಿ ಕಳೆದ ವರ್ಷ ನಮ್ಮ ಸಮುದಾಯದಲ್ಲಿ ಹೆಚ್ಚಿನ ಯುವತಿಯರು ಮರಣಕ್ಕೀಡಾಡ ಹಿನ್ನೆಲೆಯಲ್ಲಿ ನಾವು ದೇವತೆಗಳ ಮೊರೆ ಹೋಗಿದ್ದು, ಕಳೆದ ವರ್ಷದಿಂದ ಈ ಮೆರವಣಿಗೆಯಲ್ಲಿ ವಿಶೇಷವಾಗಿ ಪಾಲ್ಗೊಳ್ಳುತ್ತಾ ಬಂದಿದ್ದೇವೆ. ದೇವತೆಗಳ ದಯೆಯಿಂದ ಸಾವುಗಳು ನಿಯಂತ್ರಣಗೊಂಡ ಹಿನ್ನೆಲೆಯಲ್ಲಿ ಗ್ರಾಮ ದೇವತೆಗಳಾದ ಶ್ರೀಚಳ್ಳಕೆರೆಯಮ್ಮ ಮತ್ತು ಶ್ರೀಉಡಸಲಮ್ಮ ದೇವರಲ್ಲಿ ಪ್ರಾರ್ಥಿಸಿ ನಗರದ ಪ್ರಮುಖ ರಸ್ತೆಗಳಲ್ಲಿ ಮಂಗಳವಾದ್ಯಗಳೊಂದಿಗೆ ಮೆರವಣಿಗೆ ನಡೆಸಲಾಯಿತು.

ಪ್ರತಿವರ್ಷದಂತೆ ಈ ವರ್ಷವೂ ಸಹ ಯುಗಾದಿ ಹಬ್ಬದ ಹೊಸ ಸಂತ್ಸರದ ಆರಂಭದಲ್ಲಿ ದೇವತೆಗಳ ಪೂಜೆಯನ್ನು ನೆರವೇರಿಸಿ ನಗರದ ಪ್ರಮುಖ ರಸ್ತೆಗಳಲ್ಲಿ





ಮೆರವಣಿಗೆ ನಡೆಸುವುದಲ್ಲದೆ, ನೂರಾರು ಭಕ್ತರು ದೇವಿಯ ದರ್ಶನ ಪಡೆಯುವ ಅವಕಾಶವನ್ನು ಸಹ ಎರಡೂ ದೇವಸ್ಥಾನದ ಆಡಳಿತ ಮಂಡಳಿ ಧರ್ಮದರ್ಶಿಗಳು ಭಕ್ತರಿಗೋಸ್ಕರ ಈ ವ್ಯವಸ್ಥೆ ಮಾಡುತ್ತಾ ಬಂದಿದ್ದಾರೆ. ನಗರದ ಹಳೇಟೌನ್, ವೀರಭದ್ರಸ್ವಾಮಿ ದೇವಸ್ಥಾನದ ರಸ್ತೆ ಪಾದಗಟ್ಟೆ, ಶಾಂತಿನಗರ ಮುಂತಾದ ಕಡೆ ಎರಡೂ ದೇವತೆಗಳ ಮೆರವಣಿಗೆ ವೈಭವದಿಂದ ನಡೆಯಿತು.

ಚಳ್ಳಕೆರೆ ತಾಲ್ಲೂಕು ಮಳೆ, ಬೆಳೆ ಇಲ್ಲದೆ ಬರಡಾಗುತ್ತಿದ್ದು, ಈ ಬಾರಿಯಾದರೂ ಮಳೆ, ಬೆಳೆ ನೀಡಿ ಜನರ ನೆಮ್ಮದಿಯ ಬಾಳಿಗೆ ದಾರಿತೋರಬೇಕೆಂದು ದೇವತಗಳಲ್ಲಿ ಪ್ರಾರ್ಥಿಸಲಾಯಿತು. ಶಾಂತಿನಗರ ನಿವಾಸಿಗಳು ಹಾಗೂ ವಿಶ್ವಕರ್ಮ ಸಮಾಜದ ಬಂಧುಗಳು ಮೆರವಣಿಗೆಯಲ್ಲಿ ಭಾಗವಹಿಸಿ ಕಳೆದ ವರ್ಷ ನಮ್ಮ ಸಮುದಾಯದಲ್ಲಿ ಹೆಚ್ಚಿನ ಯುವತಿಯರು ಮರಣಕ್ಕೀಡಾಡ ಹಿನ್ನೆಲೆಯಲ್ಲಿ ನಾವು ದೇವತೆಗಳ ಮೊರೆ ಹೋಗಿದ್ದು, ಕಳೆದ ವರ್ಷದಿಂದ ಈ ಮೆರವಣಿಗೆಯಲ್ಲಿ ವಿಶೇಷವಾಗಿ ಪಾಲ್ಗೊಳ್ಳುತ್ತಾ ಬಂದಿದ್ದೇವೆ. ದೇವತೆಗಳ ದಯೆಯಿಂದ ಸಾವುಗಳು ನಿಯಂತ್ರಣಗೊಂಡಿವೆ ಎಂದು ತಿಳಿಸಿದರು.

ನಗರಸಭಾ ಸದಸ್ಯ ವಿ.ವೈ.ಪ್ರಮೋದ್, ಆರ್.ಪ್ರಸನ್ನಕುಮಾರ್, ವೆಂಕಟೇಶ್‌ಚಾರ್, ಶ್ರೀಧರ, ಬಾಲಾಜಿ, ಸಂತೋಷ್, ನಾಗರಾಜು, ಅಶೋಕ್, ಸುನಿತಾ, ನಳಿನ, ಭಾರತಿ, ರಾಜೇಶ್ವರಿ, ಲಕ್ಷ್ಮಿದೇವಿ ಮುಂತಾದವರು ಉಪಸ್ಥಿತರಿದ್ದರು.

## ಫಾಸ್ಟ್ ನ್ಯೂಸ್

### ಪರವಾನಗಿ ಪಡೆಯದ ಚಿಂಟ್ ಫಂಡ್ ಸಂಸ್ಥೆಗಳೊಂದಿಗೆ ವ್ಯವಹಾರ ಮಾಡದಿರಲು ಸೂಚನೆ

» ದಾವಣಗೆರೆ

ದಾವಣಗೆರೆ ಜಿಲ್ಲೆಯಲ್ಲಿ ಚಿಟ್ ಫಂಡ್ ನಡೆಸುತ್ತಿರುವ ಸುಮಾರು 31 ಚೀಟ್ ಫಂಡ್ ಸಂಸ್ಥೆಗಳು ಇಲಾಖೆಯಿಂದ ಪರವಾನಗಿ ಪಡೆದಿರುವುದಿಲ್ಲ ಎಂದು ಸಹಕಾರ ಸಂಘಗಳ ಉಪನಿಬಂಧಕಿ ಹೆಚ್.ಅನ್ನಪೂರ್ಣ ಅವರು ತಿಳಿಸಿದ್ದಾರೆ. ಸಂಸ್ಥೆಯ ಹೆಸರು: ಶ್ರೀರಾಮ ಚಿಟ್ಸ್ ಪ್ರೈ ಲಿ., ಕಪಿಲ್ ಚಿಟ್ಸ್ ಪ್ರೈ ಲಿ, ದಾವಣಗೆರೆ, ಶ್ರೀ ಕರಾಯಿಲ್ ಚಿಟ್ಸ್ (ಇಂಡಿಯಾ) ಲಿ. ತಿರುಪುರ ತಮಿಳುನಾಡು ಶಾಖೆ ದಾವಣಗೆರೆ, ಸ್ಥರ ಚಿಟ್ ಫಂಡ್ಸ್ ಪ್ರೈ ಲಿ., ಚೇತನಾ ಚಿಟ್ಸ್ ಹಾವೇರಿ ಪ್ರೈ ಲಿ, ದಾವಣಗೆರೆ., ಹೊಯ್ಸಳ ಚಿಟ್ ಫಂಡ್ಸ್ (ರಿ), ಸಿದ್ದೇಶ್ವರ ಚಿಟ್ಸ್ (ರಿ) ಈರುಳ್ಳಿ ಮಾರ್ಕೆಟ್ ಹತ್ತಿರ ದಾವಣಗೆರೆ., ನಯನ ಚಿಟ್ಸ್ ಫಂಡ್ ದಾವಣಗೆರೆ. ಶಶಿಕಿರಣ್ ಚಿಟ್ ಫಂಡ್ಸ್ ಪ್ರೈ ಲಿ., ಚಿಲುಕೂರಿ ಚಿಟ್ಸ್ (ಇಂಡಿಯಾ)ಪ್ರೈ.ಲಿ., ಚನ್ನಪ್ಪ ಚಿಟ್ ಫಂಡ್ಸ್(ರಿ)., ಅಭಿವೃದ್ಧಿ ಚಿಟ್ ಫಂಡ್ಸ್ (ರಿ)., ಶ್ರೀಮಂಜುನಾಥ ಚಿಟ್ ಫಂಡ್ಸ್(ರಿ)., ಎಸ್.ಆರ್.ಕೆ ಚಿಟ್ ಫಂಡ್ಸ್(ರಿ).,ಸಮೃದ್ಧಿ ಚಿಟ್ ಫಂಡ್ಸ್.,ಸೇವಾಲಾಲ್ ಚಿಟ್ ಫಂಡ್ಸ್(ರಿ)., ಎಸ್.ಎಸ್.ವಿ ಚಿಟ್ ಫಂಡ್ಸ್(ರಿ)., ಜಿ–1 ಚಿಟ್ಸ್ ಕರ್ನಾಟಕ(ರಿ)., ಶ್ರೀದುರ್ಗಾ ಚಿಟ್ ಫಂಡ್ಸ್., ಎಸ್.ಎಂ.ಜೆ ಚಿಟ್ ಫಂಡ್ಸ್(ರಿ)., ಶ್ರೀಕೃಷ್ಣ ಚಿಟ್ ಫಂಡ್ಸ್(ರಿ)., ಶ್ರೀವಿನಯ ಚಿಟ್ಸ್ ಫಂಡ್ಸ್(ರಿ)., ಕೆ.ಬಿ.ಎಸ್ ಶ್ರೀಅದೃಷ್ಠ ಚಿಟ್ ಫಂಡ್ಸ್(ರಿ)., ಶ್ರೀನಿಮಿಷಾಂಬಾ ಚಿಟ್ ಫಂಡ್ಸ್ (ರಿ).,ಶ್ರೀಕುಬೇರ ಚಿಟ್ಸ್ ಫಂಡ್ಸ್(ರಿ).,ಶ್ರೀಕಲ್ಲೇಶ್ವರ ಚಿಟ್ಸ್ (ಕ) ಪ್ರೈ ಲಿ. ಪಾಪರೆಡ್ಡಿ ಪಾಳ್ಯ ನಾಗರಭಾವಿ ಬೆಂಗಳೂರು., ಸಿದ್ಧಿ ವಿನಾಯಕ ಚಿಟ್ ಫಂಡ್ಸ್(ರಿ)., ಅಪೂರ್ವ ಚಿಟ್ ಫಂಡ್ಸ್(ರಿ)., ಭಾಗ್ಯೋದಯ ಚಿಟ್ ಫಂಡ್ಸ್(ರಿ) ಈ ಸಂಸ್ಥೆಯವರು ನಿಯಮಾನುಸಾರ ಅನುಮತಿ ಪಡೆದಿರುವುದಿಲ್ಲ. ಮೇಲಿನ ಸಂಸ್ಥೆಯವರು ಚಿಟ್ ಫಂಡ್ ನಡೆಸುವುದಾದರೆ ಅಗತ್ಯ ದಾಖಲೆಗಳೊಂದಿಗೆ 15 ದಿನಗಳೊಳಗಾಗಿ ಉಪನಿಬಂಧಕರು ಹಾಗೂ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ, ಜಿಲ್ಲಾಡಳಿತ ಭವನ, ದಾವಣಗೆರೆ ಇವರಿಗೆ ತಮ್ಮ ಮನವಿಯನ್ನು ಸಲ್ಲಿಸಬಹುದು. ತಪ್ಪಿದಲ್ಲಿ, ಚೀಟಿ ನಿಧಿಗಳ ಕಾಯ್ದೆಯಡಿ ಚೀಟಿ ವ್ಯವಹಾರ ಮಾಡಲು ನೀಡಿರುವ ಅನುಮತಿಯನ್ನು ರದ್ದುಪಡಿಸುವಂತೆ ಕೇಂದ್ರ ಕಚೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

### ಮತದಾನೋತ್ಸವ ಅಂಗವಾಗಿ ವಾಕಥಾನ್ ಕಾರ್ಯಕ್ರಮ

» ದಾವಣಗೆರೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸ್ವೀಪ್ ಸಮಿತಿ, ಜಿಲ್ಲಾ ಆಯುಷ್ ಇಲಾಖೆ, ಅಶ್ವಿನಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು, ಸುಶ್ರುತ ಆಯುರ್ವೇದಿಕ್ ಮೆಡಿಕಲ್ ಕಾಲೇಜು, ತಪೋವನ ಆಯುರ್ವೇದಿಕ್ ಮೆಡಿಕಲ್ ಕಾಲೇಜು ದಾವಣಗೆರೆ ಇವರ ಸಹಯೋಗದಲ್ಲಿ ಮೇ.2 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಜಯದೇವ ಸರ್ಕಲ್‌ನಲ್ಲಿ ಮತದಾನೋತ್ಸವದ ಅಂಗವಾಗಿ ವಾಕಥಾನ್ ಮತದಾನ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ; ಯೋಗೇಂದ್ರಕುಮಾರ್ ತಿಳಿಸಿದ್ದಾರೆ.

### ವಿದ್ಯುತ್ ವ್ಯತ್ಯಯ

» ದಾವಣಗೆರೆ

ದಾವಣಗೆರೆ ನಗರದ ಮಹಾನಗರ ಪಾಲಿಕೆ ವತಿಯಿಂದ ಅಕ್ಟೋಗನ್ ಅಳವಡಿಸಿ ವಿದ್ಯುತ್ ದೀಪದ ವ್ಯವಸ್ಥೆ ಕಲ್ಪಿಸುವ ಕಾಮಗಾರಿಯನ್ನು ಮೇ 2 ರಂದು ಹಮ್ಮಿಕೊಂಡಿರುವುದರಿಂದ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಬಸವೇಶ್ವರ ಫೀಡರ್ ವ್ಯಾಪ್ತಿಯ ಎಸ್.ಎಸ್. ಬಡಾವಣೆ ಎ & ಬಿ ಬ್ಲಾಕ್, ಶಾಂತಿ ನಗರ, ಬಸವೇಶ್ವರ ಬಡಾವಣೆ, ಬಾಪೂಜಿ ನಗರ, ಮಹಾಲಕ್ಷ್ಮೀ ಬಡಾವಣೆ ಹಾಗೂ ಸುತ್ತಮುತ್ತ ಪ್ರದೇಶಗಳು.

ಎಂ.ಸಿ.ಸಿ.ಬಿ ಎಫ್2 ಫೀಡರ್ ವ್ಯಾಪ್ತಿಯ ಎಸ್.ಎಸ್ ಲೇಔಟ್ ಎ. ಬ್ಲಾಕ್, ಕುವೆಂಪು ನಗರ, ಸಿದ್ದವೀರಪ್ಪ ಬಡಾವಣೆ, ಎಂ.ಸಿ.ಸಿ ಬಿ.ಬ್ಲಾಕ್, ಬಿ.ಐ.ಇ.ಟಿ ರಸ್ತೆ, ಗ್ಲಾಸ್‌ಹೌಸ್‌ಏರಿಯಾ, ಲಕ್ಷ್ಮೀ ಫ್ಲೋರ್ ಮಿಲ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು, ಎಸ್.ನಿಜಲಿಂಗಪ್ಪ ಫೀಡರ್ ವ್ಯಾಪ್ತಿಯ ನಿಜಲಿಂಗಪ್ಪ ಬಡಾವಣೆ, ಯಲ್ಲಮ್ಮ ನಗರ, ವಿನೋಬನಗರ 4 ನೇ ಮೇನ್, 3ನೇ ಮೇನ್, ದೇವರಾಜ್‌ಅರಸ್ ಲೇಔಟ್ ಎ. ಬ್ಲಾಕ್, ವಿನಾಯಕ ನಗರ, ಸಂಗೊಳ್ಳಿ ರಾಯಣ್ಣ ನಗರ ಹಾಗೂ ಸುತ್ತ ಮುತ್ತಲ ಪ್ರದೇಶಗಳು. ಎಫ್–21 ಸಾಯಿ ಫೀಡರ್ ವ್ಯಾಪ್ತಿಯ ಶಾಮನೂರು ರಸ್ತೆ, ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪ ಮತ್ತು ಸುತ್ತ ಮುತ್ತಲ ಪ್ರದೇಶಗಳು. ಎಫ್–15 ಸ್ವಿಮ್ಮಿಂಗ್ ಫೂಲ್ ಫೀಡರ್ ವ್ಯಾಪ್ತಿಯ ಸಿ.ಜಿ. ಆಸ್ಪತ್ರೆ, ಬಾಪೂಜಿ ಆಸ್ಪತ್ರೆ, ಡೆಂಟಲ್ ಕಾಲೇಜ್ ರೋಡ್. ಬಾಪೂಜಿ ಆಸ್ಪತ್ರೆ ರಸ್ತೆ, ಬಾಪೂಜಿ ಬ್ಯಾಂಕ್ ಹದಡಿ ರೋಡ್ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

# ಮತದಿಂದ ಭವಿಷ್ಯದ ಹಾದಿಯನ್ನು ರೂಪಿಸುವ ಶಕ್ತಿಯೇ ಚುನಾವಣೆ, ಇದು ಪ್ರಜಾಪ್ರಭುತ್ವದ ನೀತಿಗೆ ಸಾಕ್ಷಿಯಾಗಿದೆ

» ದಾವಣಗೆರೆ

ಮತ ಚಲಾಯಿಸುವ ಮೂಲಕ ರಾಷ್ಟ್ರದ ಭವಿಷ್ಯದಹಾದಿಯನ್ನುರೂಪಿಸುವಶಕ್ತಿಯೇ ಮತದಾನವಾಗಿದ್ದು ಇದು ಪ್ರಜಾಪ್ರಭುತ್ವದ ನೀತಿಗೆ ಸಾಕ್ಷಿಯಾಗಿದೆ ಎಂದು ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೃಷ್ಣನಾಯ್ಕ ತಿಳಿಸಿದರು.

ಅವರು ಸೋಮುವಾರ (29) ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ದಾವಣಗೆರೆ ಉತ್ತರ, ಇವರುಗಳ ಸಂಯುಕ್ತ ಆಶ್ರಯದಲ್ಲಿ ಸೋಮವಾರ ನಿಟ್ಟುವಳ್ಳಿಯಲ್ಲಿನ ಆರ್.ಎಂ.ಎಸ್.ಎ ಶಾಲೆಯಲ್ಲಿ ನಡೆದ ಸಂಗೀತ ಸುಧೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಯುವಕರನ್ನು ಮತದಾರರಾಗಿ ನೋಂದಾಯಿಸಲು ಮತ್ತು ನಂತರ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೇರೇಪಿಸಲು ಮತ್ತು ಉತ್ತೇಜಿಸಲು ಜಾಗೃತಿ ಮೂಲಕ ಪ್ರಯತ್ನಿಸಲಾಗುತ್ತಿದೆ. ಮತದಾನದ ದಿನ ನಾಗರಿಕರ ಕರ್ತವ್ಯವಾಗಿ ಮತದಾನದ ಮಹತ್ವವನ್ನು ಪ್ರತಿಬಿಂಬಿಸಲು ಮತ್ತು



ಸಮಾಜದಲ್ಲಿಧನಾತ್ಮಕಬದಲಾವಣೆಯನ್ನು ತರುವ ಸಾಧನವಾಗಿ ನೋಡಲು ನಮಗೆ ಮತದಾನದ ಅವಕಾಶವನ್ನು ಒದಗಿಸುತ್ತದೆ ಎಂದರು. ಅಪರ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರೀನ್ ಭಾನು ಎಸ್. ಬಳ್ಳಾರಿ ಕಾರ್ಯಕ್ರಮ ಉದ್ಘಾಟಿಸಿ ಆಯಿಲ್ ಪೇಸ್ಟ್ ಡ್ರಾಯಿಂಗ್‌ನ್ನುಸ್ಪಂಜ್‌ಕಲರ್‌ಪೌಡರ್‌ನಿಂದ ತಯಾರಿಸಿದ ಬೋರ್ಡ್‌ನಲ್ಲಿ ಮೇ 7 ರಂದು ಮತದಾನೋತ್ಸವ, ಮತದಾನ ಎಲ್ಲರ ಹಕ್ಕು ತಪ್ಪದೇ ಮತ ಚಲಾಯಿಸಿ ಎಂಬ ಪ್ರದರ್ಶನ ಇದರಲ್ಲಿ ಮೂಡಿಬಂದಿತು.

ಇದೆ ವೇಳೆ ಶಾಲಾ ಗೋಡೆ, ಪಟಗಳಲ್ಲಿ ಮತದಾನ ಜಾಗೃತಿ ಮೂಡಿದ್ದು ಹೀಗೆ ; ಪ್ರಜಾಪ್ರಭುತ್ವವು ವಿದ್ಯಾವಂತ ಮತದಿಂದ ಅಭಿವೃದ್ಧಿಹೊಂದುತ್ತದೆ,ಉತ್ತಮನಾಳೆಗಾಗಿ ಮತ ಚಲಾಯಿಸಿ, ನಿಮ್ಮ ಮತ ನಿಮ್ಮ ಹಕ್ಕು, ಸಮಾನತೆ ನ್ಯಾಯ ಮತ್ತು ಪ್ರಗತಿಗಾಗಿ ಮತ ಚಲಾಯಿಸಿ, ಮತದಾನ ನಿಮ್ಮ ಹಕ್ಕು ಮತ್ತು ಕರ್ತವ್ಯ, ಯುವ ಮನಸ್ಸುಗಳು ಶಕ್ತಿಯುತ ಮತಗಳು, ಚುನಾವಣೆ ನಿಮ್ಮ ದಿನ, ನಿಮ್ಮ ಧ್ವನಿ ಮತಗಟ್ಟೆಯಲ್ಲಿ ಪ್ರತಿಧ್ವನಿಸಲಿ, ಯುವ ಮತದಾರರೇ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಿ, ಮತದಾನ ಪ್ರಜಾಪ್ರಭುತ್ವದ ಹೃದಯ ಬಡಿತ, ಮತದಾನ ಒಂದು ಜವಾಬ್ದಾರಿ ಅದನ್ನು ಗೌರವಿಸಿ, ಬದಲಾವಣೆಗೆ ಯುವ ಮತದಾರರು ಒಗ್ಗೂಡಲಿ, ನಿಮ್ಮ ಮತವು ನಮ್ಮ ನಾಯಕನನ್ನು ರೂಪಿಸಲಿ

ಕಾರ್ಯಕ್ರಮದಲ್ಲಿ ಬಿ.ಇ.ಓ. ಡಾ.ಪುಷ್ಪಲತಾ , ಜಿಲ್ಲಾ ಪಂಚಾಯತ್ ಉಪನಿರ್ದೇಶಕಿ ಶಾರದಾ ದೊಡ್ಡಗೌಡ್ರು, ದಕ್ಷಿಣ ಕ್ಷೇತ್ರ ಸಂಪನ್ಮೂಲ ಬಿ.ಆರ್.ಪಿ. ಮತ್ತು ಸಿ.ಆರ್.ಪಿ.ಬಿ.ಐ.ಆರ್.ಟಿ ಶಿಕ್ಷಕರು ಹಾಗೂ ಸಿಬ್ಬಂದಿಗಳು ಇನ್ನಿತರರು ಭಾಗವಹಿಸಿದ್ದರು.

### ತಂಡ ಸಿದ್ದ ಮೇ 6 ರಂದು ಮಸ್ಟರಿಂಗ್ ಕೇಂದ್ರಕ್ಕೆ ಚುನಾವಣಾ ಸಿಬ್ಬಂದಿಗಳು

## ಮತದಾನ ಸಿಬ್ಬಂದಿಗಳಿಗೆ 2ನೇ ಹಂತದ ತರಬೇತಿ

» ದಾವಣಗೆರೆ

ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಮೇ 7 ರಂದು ಮತದಾನ ನಡೆಯಲಿದ್ದು ಅಣಕು ಮತದಾನವನ್ನು ಸಮಯಕ್ಕೆ ಸರಿಯಾಗಿ ಆರಂಭಿಸಿ ನಂತರ ಮಾಕ್ ಪೋಲ್ ಕ್ಲಿಯರ್ ಮಾಡಿ ಕ್ಲೋಸ್ ಬಟನ್ ಒತ್ತುವ ಮೂಲಕ ವಾಸ್ತವ ಮತದಾನ ಆರಂಭಿಸಬೇಕೆಂದು ಜಿಲ್ಲಾಧಿಕಾರಿ ಡಾ; ವೆಂಕಟೇಶ್ ಎಂ.ವಿ ತಿಳಿಸಿದರು.

ಅವರು ಮಂಗಳವಾರ ದಾವಣಗೆರೆ ಉತ್ತರ ಮತ್ತು ದಕ್ಷಿಣ ಕ್ಷೇತ್ರದ ಮತದಾನ ಸಿಬ್ಬಂದಿಗಳಿಗೆ ಏರ್ಪಡಿಸಲಾದಎರಡನೇಹಂತದತರಬೇತಿಯಲ್ಲಿ ಭಾಗವಹಿಸಿ ಮಾತನಾಡಿದರು. ಅಣಕು ಮತದಾನ ಕ್ರಿಯರ್ ಮಾಡದಿದ್ದಲ್ಲಿ ಎಣಿಕೆ ಮಾಡುವಾಗ ಸಮಸ್ಯೆಯಾಗಲಿದೆ. ಆದ್ದರಿಂದ ಎಲ್ಲರೂ ಸಿಆರ್‌ಸಿ ಮಾಡಿದ ಬಗ್ಗೆ ಖಾತರಿ ನಂತರ ಮತದಾನ ಆರಂಭಿಸುವುದನ್ನು ಮರೆಯಬಾರದು. ಅಣಕು ನಂತರ ಸಿ–ಕ್ಲೋಸ್, ಆರ್–ರಿಸಲ್ಟ್, ಸಿ–ಕ್ಲಿಯರ್ ಇದನ್ನು ಎಲ್ಲಾ ಮತದಾನ ಸಿಬ್ಬಂದಿಗಳು ನೆನಪಿನಲ್ಲಿಟ್ಟುಕೊಳ್ಳಬೇಕು. ಮತದಾನ ದಿನ ಯಾವುದೇ ಹಂತದ ಪ್ರಕ್ರಿಯೆಗಳನ್ನು ಮರೆಯದೇ ಮತಗಟ್ಟೆ ಮಾರ್ಗದರ್ಶಿ ನಿಯಮಗಳನ್ನು ತಿಳಿದುಕೊಂಡು ಕರ್ತವ್ಯ ನಿರ್ವಹಿಸಬೇಕು, ಇಲ್ಲವಾದಲ್ಲಿ ಅಂತಹ ಅಧಿಕಾರಿಗಳು, ಸಿಬ್ಬಂದಿಗಳು ಶಿಸ್ತುಕ್ರಮದ ಜೊತೆಗೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎಂದರು.

ಚುನಾವಣಾ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಮಾರ್ಗದರ್ಶನಕ್ಕಾಗಿ ಸೆಕ್ಟರ್ ಅಧಿಕಾರಿಗಳು ಇರುತ್ತಾರೆ. ಅದೇ ರೀತಿ ಪ್ರತಿ ಮತಗಟ್ಟೆಯಲ್ಲಿ ಮತದಾನವಾದ ಬಗ್ಗೆ ಮಾಹಿತಿ ನೀಡಲು ತಂಡವನ್ನು ನೇಮಕ ಮಾಡಲಿದ್ದು ಕರಾರುವಕ್ಕಾಗಿ ಮತದಾನದ ಅಂಕಿ ಅಂಶಗಳನ್ನು ನೀಡಬೇಕಾಗುತ್ತದೆ ಎಂದರು.

ಹರಿಹರ, ಹರಪನಹಳ್ಳಿಗೆ ಅಪರ ಜಿಲ್ಲಾಧಿಕಾರಿ ಭೇಟಿ; ಹರಿಹರದ ಸೆಂಟ್ ಮೇರಿಸ್ ಕಾನ್ವೆಂಟ್



ಸ್ಕೂಲ್‌ನಲ್ಲಿ ಮತಗಟ್ಟೆ ಅಧಿಕಾರಿ, ಸಿಬ್ಬಂದಿಗಳಿಗೆ ನಡೆದ ಎರಡನೇ ಹಂತದ ತರಬೇತಿಯಲ್ಲಿ ಅಪರ ಜಿಲ್ಲಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿ ಸೈಯ್ಯದಾ ಆಫ್ರೀನ್ ಭಾನು ಎಸ್.ಬಳ್ಳಾರಿಯವರು ಭೇಟಿ ನೀಡಿ ಮತದಾನ ದಿನ ಮತಗಟ್ಟೆ ಅಧಿಕಾರಿ, ಸಿಬ್ಬಂದಿಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ, ಮತದಾನ ಪ್ರಕ್ರಿಯೆಗಳ ಬಗ್ಗೆ ಮಾಹಿತಿ ನೀಡಿದರು. ಮತ್ತು ಹರಪನಹಳ್ಳಿ ಕ್ಷೇತ್ರದಲ್ಲಿ ನಡೆದ ಸೆಕ್ಟರ್ ಅಧಿಕಾರಿಗಳಿಗೆ ನೀಡಲಾದ ತರಬೇತಿಯಲ್ಲಿ ಭಾಗಿಯಾಗಿ ಸೆಕ್ಟರ್ ಅಧಿಕಾರಿಗಳ ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಿದರು.

ಮತಗಟ್ಟೆ ತಂಡ ಸಿದ್ದ; ದಾವಣಗೆರೆ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳ 1693 ಮತಗಟ್ಟೆಗಳು ಸೇರಿದಂತೆ ವಿಜಯನಗರ ಜಿಲ್ಲೆ ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ 253 ಮತಗಟ್ಟೆಗಳು ಸೇರಿ 1946 ಮತಗಟ್ಟೆಗಳು ದಾವಣಗೆರೆ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರಲಿವೆ. ಎರಡನೇ ತರಬೇತಿಯಲ್ಲಿ ಕ್ಷೇತ್ರವಾರು ಪ್ರತಿ ಮತಗಟ್ಟೆಗೆ 4 ಜನರ ತಂಡ ಸಿದ್ದವಾಗಿದ್ದು ಮೇ 6 ರಂದು ಮಸ್ಟರಿಂಗ್ ಕೇಂದ್ರದಲ್ಲಿ ಯಾವ ಮತಗಟ್ಟೆಗೆ ಈ ತಂಡ ನಿಯೋಜಿತವಾಗುತ್ತದೆ ಎಂದು ಅಂದು ತಿಳಿಯಲಿದೆ.

ವಿಧಾನಸಭಾ ಕ್ಷೇತ್ರವಾರು ನೇಮಕವಾಗಿರುವ ಅಧಿಕಾರಿ, ಸಿಬ್ಬಂದಿಗಳು; ಜಗಳೂರು ಕ್ಷೇತ್ರಕ್ಕೆ ಮತಗಟ್ಟೆ ಅಧ್ಯಕ್ಷಾಧಿಕಾರಿ, ಸಹಾಯಕ ಅಧ್ಯಕ್ಷಾಧಿಕಾರಿ, ಮತದಾನ ಸಿಬ್ಬಂದಿಗಳು ಸೇರಿ 1212, ಹರಿಹರ 1048, ದಾವಣಗೆರೆ ಉತ್ತರ 1128, ದಕ್ಷಿಣ 996, ಮಾಯಕೊಂಡ 1104, ಚನ್ನಗಿರಿ 1172 ಹಾಗೂ ಹೊನ್ನಾಳಿ ವಿಧಾನಸಭಾ ಕ್ಷೇತ್ರಕ್ಕೆ 1124 ಮತಗಟ್ಟೆ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ. ತರಬೇತಿ ನಡೆದ ಸ್ಥಳಗಳು; ಜಗಳೂರು ಸರ್ಕಾರಿ ಪದವಿ ಪೂರ್ವ ಕಾಲೇಜು, ಹರಿಹರ ಸೆಂಟ್ ಮೇರಿಸ್ ಕಾನ್ವೆಂಟ್ ಸ್ಕೂಲ್, ಹರಪನಹಳ್ಳಿ ರಸ್ತೆ, ಹರಿಹರ, ದಾವಣಗೆರೆ ಉತ್ತರ ಮತ್ತು ದಕ್ಷಿಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಿದ್ದಗಂಗಾ ವಿದ್ಯಾಸಂಸ್ಥೆ, ಸಿದ್ದರಾಮೇಶ್ವರ ಬಡಾವಣೆ, ಮಾಯಕೊಂಡ ತರಳಬಾಳು ವಿದ್ಯಾಸಂಸ್ಥೆ, ಅನುಭವ ಮಂಟಪ, ಹದಡಿ ರಸ್ತೆ, ಚನ್ನಗಿರಿ ಶ್ರೀಶ್ರೀಶ್ರೀ ಶಿವಲಿಂಗೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಹೊನ್ನಾಳಿಯಲ್ಲಿ ಶ್ರೀಮತಿ ಗಂಗಮ್ಮ ಶ್ರೀ ವೀರಭದ್ರಶಾಸ್ತ್ರಿ ಕೈಗಾರಿಕಾ ತರಬೇತಿ ಕೇಂದ್ರ, ಹಿರೇಕಲ್ಮಠ ಇಲ್ಲಿ ತರಬೇತಿ ನಡೆಯಿತು.

## ಲೋಕಸಭಾ ಚುನಾವಣೆ: ದಾವಣಗೆರೆ ವಿವಿಯಲ್ಲಿ ಜೂ.4 ರಂದು ಮತ ಎಣಿಕೆ



» ದಾವಣಗೆರೆ

ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಮೇ 7 ರಂದು ಮತದಾನ ನಡೆಯಲಿದೆ. ಮತ ಎಣಿಕೆಯು ಜೂನ್ 4 ರಂದು ಬೆಳಗ್ಗೆ 8 ಗಂಟೆಯಿಂದ ತೋಳಹುಣಸೆಯಲ್ಲಿನ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿಯಲ್ಲಿ ನಡೆಯಲಿದ್ದು ಇವಿಎಂ ಭದ್ರತಾ ಕೊಠಡಿ ಮತ್ತು ಎಣಿಕೆ ಕೇಂದ್ರದ ಸಿದ್ದತೆಯನ್ನು ಏಪ್ರಿಲ್ 29 ರಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ; ವೆಂಕಟೇಶ್ ಎಂ.ವಿ ಪರಿಶೀಲಿಸಿದರು. ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಹರಪನಹಳ್ಳಿ ಸೇರಿದಂತೆ ಒಟ್ಟು 8 ವಿಧಾನಸಭಾ ಕ್ಷೇತ್ರಗಳು ಬರಲಿದೆ. ಎಲ್ಲಾ 8 ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಶಿವಗಂಗೋತ್ರಿಯಲ್ಲಿ ನಡೆಯಲಿದೆ. ಇಲ್ಲಿನ ಕಾಮರ್ಸ್ ಬ್ಲಾಕ್ ನೆಲಮಹಡಿಯಲ್ಲಿ 4 ಕ್ಷೇತ್ರ ಮತ್ತು ರಾಜ್ಯಶಾಸ್ತ್ರ ಬ್ಲಾಕ್‌ನ ಮೊದಲ ಮಹಡಿಯಲ್ಲಿ 4 ಕ್ಷೇತ್ರಗಳ ಮತ ಎಣಿಕೆ ನಡೆಯಲಿದೆ.

ಮೇ 7 ರಂದು ಮತದಾನ ನಡೆಯುವುದರಿಂದ ಮತದಾನ ನಂತರ ಇವಿಎಂಗಳನ್ನು ಡಿಮಸ್ಟರಿಂಗ್ ಕೇಂದ್ರದಿಂದ ಭದ್ರತೆಯೊಂದಿಗೆ ಎಣಿಕೆ ಕೇಂದ್ರಕ್ಕೆ ತಂದು ಭದ್ರತಾ ಕೊಠಡಿಯಲ್ಲಿ ಮತಪೆಟ್ಟಿಗೆಯನ್ನು ಕಾಯ್ದಿರಿಸಲಾಗುತ್ತದೆ. ಮೇ 8 ರಿಂದ ಎಣಿಕೆ ನಡೆಯುವವರೆಗೆ ಅರೆ ಸೇನಾಪಡೆಯ ಭದ್ರತೆಯೊಂದಿಗೆ ಜೂನ್ 4 ರಂದು ನಡೆಯುವ ಎಣಿಕೆವರೆಗೆ ಸಂಪೂರ್ಣ ಸರ್ಪಗಾವಲಿನ ಭದ್ರತಾ ವ್ಯವಸ್ಥೆ ಮಾಡಲಾಗಿರುತ್ತದೆ. ಮತದಾನದ ನಂತರ ಇವಿಎಂ ಭದ್ರತಾ ಕೊಠಡಿಯಲ್ಲಿ ಸಂಗ್ರಹಿಸುವುದರಿಂದ ಎಣಿಕೆ ಸಿದ್ದತೆಯನ್ನು ಈಗಲೇ ಮಾಡಿಕೊಳ್ಳಬೇಕಾಗಿದ್ದು ಸಿದ್ದತೆಯನ್ನು ಪರಿಶೀಲಿಸಲಾಯಿತು.

ಎಣಿಕೆ ಪೂರ್ವ ಇವಿಎಂ ಭದ್ರತೆಗೆ ಟ್ರೈರ್ ಪದ್ದತಿ; ಮತದಾನ ನಂತರ ಇವಿಎಂ ಸಂಗ್ರಹಿಸಲಾದ ಎಣಿಕೆ ಕೇಂದ್ರದಲ್ಲಿ ಸಿಸಿಟಿವಿ ಕಣ್ಗಾವಲು ಜೊತೆಗೆ 100 ಮೀಟರ್ ವ್ಯಾಪ್ತಿಯೊಳಗೆ ಸಿಎಪಿಎಫ್ ಕೇಂದ್ರ ಸಶಸ್ತ್ರ ಪೊಲೀಸ್ ಫೋರ್ಸ್ ಭದ್ರತೆಯನ್ನು ನೀಡಲಾಗುತ್ತದೆ. ಮತ್ತು ನಂತರ ರಾಜ್ಯ ಸಶಸ್ತ್ರ ಮೀಸಲು ಪಡೆಯ ಭದ್ರತೆ ಒದಗಿಸಲಾಗಿರುತ್ತದೆ. ಚುನಾವಣಾಧಿಕಾರಿಗಳು ಪ್ರತಿದಿನ ಎರಡು ಭಾರಿ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸುವರು. ಇವಿಎಂ ಭದ್ರತಾ ಕೊಠಡಿ ಪರಿಶೀಲನೆಗೆ ಅಭ್ಯರ್ಥಿಗಳಿಗೂ ಅವಕಾಶ; ಮೇ 7 ರಂದು ನಡೆಯುವ ಮತದಾನ ನಂತರ 1946 ಮತಗಟ್ಟೆಗಳಲ್ಲಿನ ಮತಪೆಟ್ಟಿಗೆಗಳನ್ನು ಎಣಿಕೆ ಕೇಂದ್ರದಲ್ಲಿನ ಭದ್ರತಾ ಕೊಠಡಿಗಳಲ್ಲಿ ಕ್ಷೇತ್ರವಾರು ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತದೆ. ಎಲ್ಲಾ ಭದ್ರತಾ ಕೊಠಡಿಗಳ ಸುತ್ತಲೂ ಸಿಸಿ ಕ್ಯಾಮೆರಾ ಅಳವಡಿಸಲಾಗುತ್ತದೆ. ಎಲ್ಲಾ ಕಿಟಕಿ, ಬಾಗಿಲುಗಳನ್ನು ಮುಚ್ಚಿ ಸೀಲ್ ಮಾಡಲಾಗಿರುತ್ತದೆ. ಮತ್ತು ಪ್ರತಿ ಭದ್ರತಾ ಕೊಠಡಿಗೂ ಕೇಂದ್ರ ಸಶಸ್ತ್ರ ಪೊಲೀಸ್ ಫೋರ್ಸ್ ಕಾವಲಿರುತ್ತದೆ. ಭದ್ರತಾ ವ್ಯವಸ್ಥೆ ಪರಿಶೀಲಿಸಲು ಸಿಸಿಟಿವಿ ಅಳವಡಿಸಲಾಗಿದ್ದು ಇದೆಲ್ಲವನ್ನು ನಿಯಂತ್ರಣಕ್ಕಾಗಿ ಕಂಟ್ರೋಲ್ ರೂಂ ಸ್ಥಾಪಿಸಲಾಗುತ್ತದೆ. ಇಲ್ಲಿ ಎಲ್ಲಾ ಕಡೆಯ ಸಿಸಿಟಿವಿಗಳ ಪ್ರದರ್ಶನ ಇರಲಿದೆ. ಅಭ್ಯರ್ಥಿಗಳು ಕಂಟ್ರೋಲ್ ರೂಂಗೆ ಬಂದು ಪರಿಶೀಲಿಸಬಹುದಾಗಿದೆ.

### ಹಿರಿಯ ನಾಗರಿಕರಿಂದ ಮತದಾನ ಜಾಗೃತಿ

ದಾವಣಗೆರೆ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಹಾಗೂ ಸ್ವೀಪ್ ಸಮಿತಿ ವತಿಯಿಂದ ಲೋಕಸಭಾ ಚುನಾವಣೆ ಅಂಗವಾಗಿ ಹಿರಿಯ ನಾಗರಿಕರಿಂದ ಮಂಗಳವಾರ ಮತದಾನ ಜಾಗೃತಿ ಜಾಥ ಹಮ್ಮಿಕೊಳ್ಳಲಾಗಿತ್ತು. ಜಾಥ ಎಂ.ಸಿ.ಸಿ.ಬಿ ಬ್ಲಾಕ್ ಚಿಲ್ಡ್ರನ್ ಪಾರ್ಕ್‌ನಿಂದ ಆರಂಭಗೊಂಡು, ಗುಂಡಿ ಸರ್ಕಲ್ ನಲ್ಲಿ ಅಂತ್ಯವಾಯಿತು. ಮತದಾನ ಜಾಥಾದಲ್ಲಿ ಭಾಗವಹಿಸಿದದ ಶತಮಾನ ದಾಟಿದ ಹಿರಿಯ ನಾಗರಿಕ ಮತದಾರರಾದ ಶೇಕ್ ಮದರ್ ಸಾಬ್ (103), ಕೆ ರಾಜು (103), ಬಸಮ್ಮ (101), ಹನುಮಂತಪ್ಪ (103), ಹನುಮಮ್ಮ (102) ಇವರುಗಳಿಗೆ ವಿಶೇಷವಾಗಿ ಸನ್ಮಾನಿಸಲಾಯಿತು. ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲನಾಯ್ಕ, ಜಿಲ್ಲಾ ವಿಶೇಷಚೇತನರ ಮತದಾರರು ಮತ್ತು ಇನ್ನಿತರರು ಉಪಸ್ಥಿತರಿದ್ದರು.



## ಪ್ರಮುಖ ಸುದ್ದಿ

### ಅಭ್ಯರ್ಥಿಗಳ ಭವಿಷ್ಯ ಮತಪೆಟ್ಟಿಗೆಯಲ್ಲಿ ಭದ್ರ: ಮನದಾಳದಲ್ಲಿ ಢವ ಢವ

# ಹೊಸದುರ್ಗ: ಪರಾಕಾಷ್ಠೆ ತಲುಪಿದ ಲೋಕಸಭಾ ಬೆಟ್ಟಿಂಗ್ ಸಮರ

» ನಾಗತಿಹಳ್ಳಿ ಮಂಜುನಾಥ್

ಹೊಸದುರ್ಗ: 18 ನೇ ಲೋಕಸಭಾ ಸಾರ್ವತ್ರಿಕ ಚುನಾವಣೆಯ ಚಿತ್ರದುರ್ಗ ಕ್ಷೇತ್ರದ ಮತ ಸಮರ ಏ.26 ಕ್ಕೆ ಮುಗಿದ ಅಧ್ಯಾಯವಾಗಿದೆ.

ಇದೀಗ ತಾಲ್ಲೂಕಿನಾದ್ಯಂತ ಕೂತಲ್ಲಿ, ನಿಂತಲ್ಲಿ ಜನರು ಗೆಲುವು ಸೋಲಿನ ಲೆಕ್ಕಾಚಾರದಲ್ಲಿ ನಿರತರಾಗಿದ್ದಾರೆ. ಮೇಲೆ,ಕೆಳಗೆ,ಒಳಗೆ ಹೊರಗೆ ತಮ್ಮದೆ ಆದ ರೀತಿಯಲ್ಲಿ ಮತಗಳಿಕೆಯ ವಿಚಾರ ಮಂಥನ ನಡೆದಿದೆ. ಮಳೆ ಬೇರೆ ಇಲ್ಲಾ ಮಾಡಲು ಕೈ ತುಂಭಾ ಕೆಲಸವಿಲ್ಲಾ ಇನ್ನೇನು ಮಾಡುವುದು ಎಂಬಂತಾಗಿದೆ.

ಒಟ್ಟು 22 ಅಭ್ಯರ್ಥಿಗಳು ಕಣದಲ್ಲಿದ್ದರೂ ಸಹ ಕಾಂಗ್ರೇಸ್ ಮತ್ತು ಬಿಜೆಪಿ ನಡುವೆ ಜಿದ್ದಾಜಿದ್ದಿ ಹಣಾಹಣಿ ನಡೆದಿದೆ. ಉಳಿದವರು ಮೂಲೆಗುಂಪಾಗಿದ್ದಾರೆ. ಎಲ್ಲಾ ಮತದಾರರು ಈ ಎರಡು




ಪಕ್ಷಗಳ ಅಭ್ಯರ್ಥಿಗಳ ಮತಗಳಿಕೆಯ ಅಂದಾಜಿನಲ್ಲಿ ನಿರುತರಾಗಿದ್ದಾರೆ.ನೀತಿ ಸಂಹಿತಿ ಜಾರಿ,ಆಯೋಗದ ಕಟ್ಟೆಚ್ಚರಿಕೆಯ ಮಧ್ಯೆ ಚುನಾವಣೆಗಳ ಸಂಪ್ರದಾಯದಂತೆ ಎಲ್ಲಾ ಅಭ್ಯರ್ಥಿಗಳಿಂದಲೂ ಹೆಂಡ. ಖಂಡ ಹಾಗೂ ಹಣದ ಹೊಳೆ ಹರಿದಿದೆ ಎಂಬುದು ತಾಲ್ಲೂಕಿನ ಜನತೆಯ ಬಾಯಲ್ಲಿ ಹರಿದಾಡುತ್ತಿದೆ.

ಹೊರಗೆ ಭಣಭಣ ಒಳಗೆ ಝಣ ಝಣ ಎಂಬ ಸದ್ದು ಎಲ್ಲಾ ಕೆಡೆಯೂ ಸಹಾ ಕಹಳೆ ಊದಿದೆ, ಗೆಲುವಿಗಾಗಿ ಅಭ್ಯರ್ಥಿಗಳಿಗೆ ಅನಿವಾರ್ಯವೂ ಆಗಿದೆ. ಆಯೋಗವು ಚುನಾವಣಾ ಅಕ್ರಮಗಳಿಗೆ ಕಡಿವಾಣ ಹಾಕಲು ನಾನಾ ರೀತಿಯ ತಂತ್ರಗಳ ಬಲೆ ಬೀಸಿದರೂ "ಚಾಪೆ ಕೆಳಗೆ ನುಸುಳಿದರೆ ರಂಗೋಲೆ ಕೆಳಗೆ ನುಸಿಯುತ್ತೇವೆ"ಎಂಬ ಮಾತಿನಂತೆ ಅಭ್ಯರ್ಥಿಗಳು ಅಚ್ಚುಕಟ್ಟಾಗಿ ಮತದಾರರನ್ನು ಸ್ಪಂದಿಸಿದ್ದಾರೆ. ಇದರಿಂದಲೇ ಈ ತಾಲ್ಲೂಕಿನಲ್ಲಿ ಶೇ.74 ರಷ್ಟು ಮತದಾನ ನಡೆಸಿದೆ.

ಫಲಿತಾಂಶ ತಿಳಿಯಲು ಒಂದು ತಿಂಗಳು ಕಾಯಲೇ ಬೇಕಾಗಿದೆ, ಅಭ್ಯರ್ಥಿಗಳ ಭವಿಷ್ಯ ಮತಪೆಟ್ಟಿಗೆಯಲ್ಲಿ ಭದ್ರವಾಗಿದ್ದರೂ ಅಭ್ಯರ್ಥಿಗಳ ಮನದಾಳದಲ್ಲಿ ಡವ ಡವ ಎನ್ನುತ್ತ ನಿದ್ರೆಗೆಡಿಸುತ್ತಿದೆ. ಆಗಾಗ ಬರುವ ಅಂತೆ ಕಂತೆಗಳ ಮಾಹಿತಿಗಳು ಅಭ್ಯರ್ಥಿಗಳಿಗೆ ದಿಗಿಲು ಮುಟ್ಟಿಸುತ್ತಿದೆ. ಎಷ್ಟೋ ಅಭ್ಯರ್ಥಿಗಳು ಜ್ಯೋತಿಷ್ಯಗಾರರ ಸಂಪರ್ಕದಲ್ಲಿದ್ದಾರೆ, ದೇವರುಗಳಿಗೆ ಹರಕೆ ಹೊತ್ತಿದ್ದಾರೆ, ಕೇಳಿ ಬರುವ ಮಾತುಗಳಿಂದ ಎಷ್ಟೋ ಭಾರಿ ಅಭ್ಯರ್ಥಿಗಳು ಕಂಗಾಲಾಗುತ್ತಿದ್ದಾರೆ.

ಈ ಮಧ್ಯೆ ಯಾರಿಗೆ ಗೆಲವು ಯಾರಿಗೆ ಸೋಲು ಎಂಬ ಬಗ್ಗೆ ಪರಸ್ಪರ ಬೆಟ್ಟಿಂಗ್ ಸಮರ ಮುಗಿಲು ಮುಟ್ಟಿದೆ, ಹತ್ತು ಸಾವಿರದಿಂದ ಒಂದು ಲಕ್ಷದವರೆಗೂ ಬೆಟ್ಟಿಂಗ್ ಕಟ್ಟಲಾಗುತ್ತಿದೆ ಎಂಬ ಮಾಹಿತಿ ಸಾರ್ವಜನಿಕ ವಲಯಗಳಿಂದ ಕೇಳಿಬರುತ್ತಿದೆ, ಸ್ಪರ್ಧೆಯಲ್ಲಿ ಒಬ್ಬರೇ ಗೆಲ್ಲುವುದು ನಿಶ್ಚಯ ಎಂಬುದು ಎಲ್ಲರಿಗೂ ಗೊತ್ತಿದ್ದರೂ ಸಹ ಪಕ್ಷಗಳ ಕಾರ್ಯಕರ್ತರು ಮತ್ತು ಬೆಂಬಲಿಗರಲ್ಲಿ ಹುಮ್ಮಸ್ಸು ಇಮ್ಮಡಿಸುತ್ತ ಬೆಟ್ಟಿಂಗ್ ಸಮರದಲ್ಲಿ ನಿರುತರಾಗಿದ್ದಾರೆ.





## ಕಾಡುವ ನಾಯಕ

# ಶ್ರೀನಿವಾಸ ಪ್ರಸಾದ್

**–ಸುರೇಶ್ ಕಂಜರ್ಪಣೆ**

ಸಾಮಾಜಿಕ ಆರ್ಥಿಕ ಬದಲಾವಣೆಗೆ ಹೋರಾಡುವ ವ್ಯಕ್ತಿ/ಸಂಘಟನೆಗಳಿಗೆ ಒಂದು ಒಳಮುಖದ ಆತ್ಮ ವಿಮರ್ಶೆ ಇರಬೇಕಾಗುತ್ತದೆ. ಈ ಆತ್ಮ ವಿಮರ್ಶೆ ಒಂದು ಸಿದ್ಧಾಂತವನ್ನು, ಹೋರಾಟವನ್ನು, ಬದ್ಧತೆಯನ್ನು ಗಟ್ಟಿಗೊಳಿಸುತ್ತೆ.

78–80ರ ಮಧ್ಯೆ ದಸಂಸ ಕರ್ನಾಟಕದಲ್ಲಿ ಈ ಸಾಮಾಜಿಕ ನ್ಯಾಯ ಮತ್ತು ಜಾತಿ ಅಸಮಾನತೆಯ ವಿರುದ್ಧ ಸಂಘಟಿತವಾದ ಬಗೆ ಅಪೂರ್ವವಾದದ್ದು. ಅದಕ್ಕೊಂದು ಅಪೂರ್ವ ಆತ್ಮ ವಿಮರ್ಶೆ ಮತ್ತು ಎಲ್ಲರನ್ನೂ ಒಳಗೊಳ್ಳುವ ನೈತಿಕ ಔದಾರ್ಯವೂ ಇತ್ತು. ನಾವು ಓದುತ್ತಿದ್ದಾಗ ದಸಂಸದ ಕಾರ್ಯಕ್ರಮಗಳ ಈ ನೈತಿಕ ನಿಚ್ಚಳತೆಯೇ ನಮ್ಮನ್ನು ಬೆಳೆಸಿದ್ದು ಅನ್ನಿಸುತ್ತೆ.

ಸದಾ ಸರ್ಕಾರದ ವಿರುದ್ಧ ಮೇಲ್ಜಾತಿಯವರ ವಿರುದ್ಧ ಕೂಗಿ ಕೂಗಿ ರೇಗುತ್ತಿದ್ದಾಗ, ದೇವನೂರು ಮಹಾದೇವ ಮತ್ತು ಅವರ ಸಂಗಾತಿಗಳು ಒಂದು ಅಪೂರ್ವ ಕಾರ್ಯಕ್ರಮ ಸಂಘಟಿಸಿದ್ದರು. ನಮ್ಮ ಕಷ್ಟ ಸಂಕಷ್ಟಗಳನ್ನು ಮುಂದಿಡಲು ನಮ್ಮ ಪ್ರತಿನಿಧಿಗಳೇ ಸಾಕಷ್ಟು ಇದ್ದಾರೆ; ಅವರು ಅಧಿಕಾರ, ಪಕ್ಷದ ಹಂಗಿನಲ್ಲಿ ಮೈ ಮರೆತಿದ್ದಾರೆ. ಆದ್ದರಿಂದ ನಮ್ಮ ಪ್ರತಿಭಟನೆ ಅವರ ವಿರುದ್ಧವೂ ಇರಬೇಕು ಎಂಬುದು ಈ ಕಾರ್ಯಕ್ರಮದ ಸ್ಥೂಲ ನಿಲುವು. ದಲಿತ ಮಂತ್ರಿ–ಶಾಸಕರ ಮನೆ ಎದುರು ಧರಣಿ ಹುಟ್ಟಿಕೊಂಡದ್ದು ಹೀಗೆ. ಇದೊಂದು ಅಪೂರ್ವ ಆತ್ಮ ವಿಮರ್ಶೆಯ ನಿಲುವು. ಮನೆಮಂದಿಯೇ ಮನೆಯಾತನ ವಿರುದ್ಧ ತಣ್ಣಗಿನ ಪ್ರತಿಭಟನೆ ಮಾಡುವ ಪರಿ ಇದು.

ಈಗಿನಂತೆ ಆಗಲೂ ಮೈಸೂರು ಚಾಮರಾಜನಗರಗಳ ಬಹುತೇಕ ಶಾಸಕರು ಮೈಸೂರಿನಲ್ಲೇ ಮನೆ ಮಾಡಿಕೊಂಡಿದ್ದರು. ವೆಂಕಟರಮಣ, ಟಿ.ಎನ್ ನರಸಿಂಹಮೂರ್ತಿ ಹೀಗೆ ದಲಿತ ಮೀಸಲಾತಿ ಕಾರಣಕ್ಕಾಗಿ ಶಾಸಕರಾದವರು ಇದ್ದರು. ಶ್ರೀನಿವಾಸ್ ಪ್ರಸಾದ ಆಗ ಲೋಕಕಸಭಾ ಸದಸ್ಯರಾಗಿದ್ದರು. ಎಷ್ಟು ಜನ ಶಾಸಕರಿದ್ದಾರೆ ಎಂಬ ತಲೆ ಲೆಕ್ಕ ಹಾಕಿ ಒಬ್ಬೊಬ್ಬರ ಮನೆ ಎದುರೂ ಇಂತಿಷ್ಟು ಜನ ದಸಂಸ ಕಾರ್ಯಕರ್ತರು ಬ್ಯಾನರ್ ಕಟ್ಟಿ ಧರಣಿ ಕೂರುವುದು ಎಂದು ದಸಂಸದ ಮೈಸೂರು ಕಾರ್ಯಕರ್ತರು ನಿರ್ಧರಿಸಿ ಕಾರ್ಯಕರ್ತರನ್ನು ಹಂಚಿ ಹಾಕಲಾಯಿತು. ದೇವನೂರು ಎಲ್ಲೆಲ್ಲಿ ಹೇಗೆ ನಡೆಯುತ್ತಿದೆ ಎಂಬ ಮಾಹಿತಿ ಪಡಕೊಂಡು ಅವಶ್ಯ ಬಿದ್ದಲ್ಲಿ ಮಾರ್ಗದರ್ಶನ ಕೊಡುವ ಕೆಲಸ ವಹಿಸಿಕೊಂಡಿದ್ದರು. ಇದೊಂತರಾ ಬೂತ್ ಗಳಿಗೆ ಭೇಟಿ ಕೊಟ್ಟ ಹಾಗೆ.



ಶ್ರೀನಿವಾಸ್ ಪ್ರಸಾದ ಮನೆ ಎದುರು ಕೂರುವ ತಂಡದಲ್ಲಿ ನಾನೂ ಇದ್ದೆ. ಇಂದುಧರ ಹೊನ್ನಾಪುರ ಅವರ ಭಾವ ಕೂಡಾ ಇದ್ದರು. ಅವರ ಹೆಸರು ಸಹಿತ ಇನ್ನೊಂದಷ್ಟು ಗೆಳೆಯರ ಹೆಸರು ಈಗ ನೆನಪಿಲ್ಲ. ಸರಿ, ಅಶೋಕಪುರಂನ ಶ್ರೀನಿವಾಸ ಪ್ರಸಾದ ಮನೆ ಎದುರು ಒಂದು ಬ್ಯಾನರ್ ತಗುಲಿ ಹಾಕಿ ಪ್ಲಾಸ್ಟಿಕ್ ಗೋಣಿ ಹೊಲಿದ ಹಚ್ಚಡದ ತರದ ಒಂದನ್ನು ಶಾಮಿಯಾನಾ ತರ ಕಟ್ಟಿ ಕೂತದ್ದಾಯಿತು. ಎಳನೀರು ಮಾರುವವರು ಹರಕು ಗೋಣಿ ಕಟ್ಟಿ ನೆರಳಲ್ಲಿ ಕೂತ ಹಾಗೆ ಈ ವ್ಯವಸ್ಥೆ. ಕೂತರೆ ಸುಮ್ಮನಿರಲಾಗುತ್ತದೆಯೇ..? ಹೋರಾಟದ ಹಾಡುಗಳು ಶುರುವಾಯಿತು. ಕಪ್ಪುಕಪ್ಪು ಮೋಡದಲಿ.. ಯಾರಿಗೆ ಬಂತು ಎಲ್ಲಿಗೆ ಬಂತು.. ಹೀಗೆ

ಆ ದಿನ ಪ್ರಸಾದ್ ಮನೆಯಲ್ಲಿ ಏನೋ ಪೂಜೆ ಇಟ್ಟುಕೊಂಡಿದ್ದರು. ನಮಗೆ ಗೊತ್ತಿರಲಿಲ್ಲ. ಹಾಡಿನ ವರಸೆ ಕೇಳುತ್ತಿದ್ದಂತೆ, ಕೆರಳಿದ ಪ್ರಸಾದ್ ಅವರ ಕೆಲವು ಅನುಯಾಯಿಗಳು ಹೊರಗೆ ಬಂದು, ಏನು ಧರಣಿ ಕೂರ್ತೀರಾ? ನಡೀರಾಚೆ ಎಂದಿದ್ದೇ, ನಮ್ಮ ಹುಲು ಶಾಮಿಯಾನಾವನ್ನು ಕಿತ್ತು ನಮ್ಮನ್ನೆಲ್ಲಾ ಕತ್ತು ಪಟ್ಟಿ ಹಿಡಿದು ತಳ್ಳಿದರು. ಅಲ್ಲೇ ಇದ್ದರೆ ಇನ್ನೂ ರಾದ್ಧಾಂತವಾಗುತ್ತದೆ ಎಂದು ಅಲ್ಲಿಂದ ಬಂದು ರಸ್ತೆ ಮೂಲೆಯಲ್ಲಿ ಸುಮ್ಮನೆ ಅನಾಥರ ಹಾಗೆ ನಿಂತೆವು. ನಮ್ಮ ತಂಡದ ಒಂದಿಬ್ಬರು ಸೈಕಲ್ ಹಾಕಿಕೊಂಡು ದೇವನೂರ ಅವರಿಗೆ ವಿಷಯ ತಿಳಿಸಿದರು. ದೇವನೂರು ಒಂದೈದು ನಿಮಿಷ ಸುಮ್ಮನೆ ಕೂತಿದ್ದವರು, ನಾನೇ ಬರ್ತೀನಿ ಅಂದವರು, ಹತ್ತೇ ನಿಮಿಷದಲ್ಲಿ ಪ್ರಸಾದ್ ಮನೆ ಎದುರು ಹಾಜರಾಗಿ ನಾವು ಕೂತಲ್ಲೇ, ನಮ್ಮೊಂದಿಗೆ ಕೂತರು. ಉರಿ ಬಿಸಿಲು. ಶಾಮಿಯಾನಾ ಎಂಬ ಹರಕು ತುಂಡು ಕಿತ್ತೊಗಿತ್ತಲ್ಲ.

**ಒಂದೈದು ನಿಮಿಷ ವಿಚಿತ್ರ ಮೌನ. ಅಸಹನೀಯ ಕುತೂಹಲ:** ಪ್ರಸಾದ್ ಮನೆಯೊಳಗಿಂದ ಬಂದರು. (ಪ್ರಸಾದ ಮತ್ತು ದೇವನೂರರ ಸಹೋದರ ಸ್ನೇಹ ವಿಶ್ವಾಸ ಗೊತ್ತಿದ್ದವರಿಗೆ ಈ ಸನ್ನಿವೇಶ ಅರ್ಥವಾದೀತು) ಬಂದಿದ್ದೇ ದೇವನೂರರ ಹತ್ತಿರ ಏರುದನಿಯಲ್ಲಿ ವಾದಕ್ಕೆ ನಿಂತರು. ನಾವು ದಂಗು ಬಡಿದು ಹೋಗಿದ್ದೆವು. ನಾವೆಲ್ಲಾ ನೋಡಿದ ಶಾಸಕ, ಎಂ.ಪಿಗಳು ಡೊಳ್ಳು ಹೊಟ್ಟೆ ಹೊತ್ತು ದೇಶಾವರಿ ಮಾತಿನ ವರಸೆಯಲ್ಲಿ ಇರುತ್ತಿದ್ದವರೇ ಹೊರತು, ರಕ್ತಮಾಂಸ ತುಂಬಿದ ಮನುಷ್ಯರ ಹಾಗೆ ವರ್ತಿಸಿದ್ದು ನಾವು ನೋಡಿರಲಿಲ್ಲ.

ನಾನು ಕೆಲಸ ಮಾಡಿಲ್ವಾ? ನನ್ನ ಕೈಲಾದಷ್ಟು ನಾನು ದಲಿತ ಹಿತಾಸಕ್ತಿ ಬಗ್ಗೆ ಶಕ್ತಿ ಮೀರಿ ದುಡೀತಿಲ್ವಾ? ಎಂಬುದು ಅವರ ವಾದ. ಮಾತಾಡುತ್ತಾ ಮಾತಾಡುತ್ತಾ ಪ್ರಸಾದ್ ದನಿ ಗದ್ಗದವಾಯಿತು.ಎಂಥಾ ಏರುದನಿಯಾದರೂ ಅಳು ಬೆರೆತ ದನಿ ಅದು. ದೇವನೂರ ಶಾಂತವಾಗಿ ಅವರ ಬೆನ್ನು ಸವರಿ, ನಮ್ಮ ಹುಡುಗರ ಮೇಲೆ ಹಲ್ಲೆ ಆಗಿದೆ. ಇದು ಸಾಂಕೇತಿಕ ಧರಣಿ. ಇದರ ಉದ್ದಿಶ್ಯ ನಿನಗೆ ಅರ್ಥವಾಗಬೇಕಿತ್ತು. ವ್ಯಕ್ತಿಗತವಾಗಿ ಒಬ್ಬ ಶಾಸಕನ ಬಗ್ಗೆ ಆಗಿದ್ದರೆ ಅದು ಬೇರೆ. ಇದು ಚಳವಳಿಯ ಭಾಗ ಎಂದು ಸ್ಪಷ್ಟನೆ ಕೊಡುತ್ತಾ ಹೋದರು. ಟವೆಲ್ ಒಂದರಲ್ಲಿ ಕಣ್ಣೀರು ಒರೆಸಿಕೊಂಡ ಪ್ರಸಾದ್ ನನ್ನನ್ನು ನಿಮ್ಮೋನು ಅಂತ ಕಾಣಲಿಲ್ಲ ಅನ್ನೊದೇ ಬೇಜಾರು ಎಂದು ಶಕ್ತಿ ಉಡುಗಿ ನಿಂತರು. ನಾವೆಲ್ಲಾ ಮಾತು ಕಡಿದು ನಿಂತಿದ್ದೆವು. ನಾವಷ್ಟೇ ಅಲ್ಲ; ಇಡೀ ಲೊಕಾಲಿಟೀನೆ ಸ್ತಬ್ಧವಾಗಿತ್ತು. ಪ್ರಸಾದ್ ಸಾವರಿಸಿಕೊಂಡು, ಊಟಕ್ಕೆ ಬನ್ನಿ , ಊಟ ಮಾಡ್ಕೊಂಡು ಹೋಗಿ ಎಂದರು.

ದೇವನೂರು ತಣ್ಣಗೆ ನಿರಾಕರಿಸಿದರು. ಇಲ್ಲೇ ಕೂತಿರ್ತೇವೆ ಎಂದರು. ಆ ಉರಿಬಿಸಿಲಿಗೆ ಅಲ್ಲೊಂದು ಶಾಮಿಯಾನಾ ಹಾಕಲೂ ಬಿಡಲಿಲ್ಲ. ಉರಿಬಿಸಿಲಲ್ಲಿ ದೇವನೂರು. ಮನೆ ಒಳಗೆ ಮುನಿಸು, ಸಂತಾಪದಲ್ಲಿ ಪ್ರಸಾದ್. ನಮ್ಮ ಧರಣಿ ಪೂರ್ವ ನಿರ್ಧಾರದಂತೆ ಮತ್ತೊಂದಷ್ಟು ಹೊತ್ತಿಗೆ ಬರ್ಖಾಸ್ತಾಯಿತು. ಆ ದಿನ ಪ್ರಸಾದ್ ಮನೆಯಲ್ಲೂ ಯಾರೂ ಉಣಲಿಲ್ಲ ಎಂದು ಆಮೇಲೆ ಗೊತ್ತಾಯಿತು. ಪ್ರಸಾದ್ ತೀವ್ರ ದುಃಖ ಆಕ್ರೋಶದಲ್ಲಿ ಏನೂ ತಿನ್ನದೇ ಕೂತಿದ್ದರಂತೆ. ಇನ್ನು ಮನೆಯವರು, ನೆಂಟರು ತಿನ್ನುತ್ತಾರೆಯೇ?

ನಾವು ಈ ಕಡೆ ಬಂದು ಏನು ತಿಂದೆವು ನೆನಪಿಲ್ಲ. ಆದರೆ ಆ ದಿನ ದಸಂಸದ ನೈತಿಕ ನಿಷ್ಠುರತೆ ಅನಾವರಣಗೊಂಡ ರೀತಿ ಕಾದ ಕಬ್ಬಿಣದಲ್ಲಿ ಬರೆ ಇಟ್ಟಂತೆ ನನ್ನಲ್ಲಿ ಇಂದೂ ಉಳಿದುಕೊಂಡಿದೆ.

ದೇವನೂರ ಮಹಾದೇವ ಅವರ ನೈತಿಕ ನಾಯಕತ್ವದ ಬಿಗಿ ನಮ್ಮಂತವರನ್ನು ಬೆಳೆಸಿದ ರೀತಿಗೆ ಇದೊಂದು ನೆನಪಿನ ಉದಾಹರಣೆ. ಅಂದು ಭಾವಾವೇಶದಲ್ಲಿ ನಡುಗಿದ್ದ ಪ್ರಸಾದ್ ಇಂದಿಗೂ ಕಾಡುತ್ತಾರೆ. ಇಬ್ಬರಿಗೂ ಎಷ್ಟು ವಯಸ್ಸು? 30ರ ಮುಂದೆ ಇನ್ನೊಂದಷ್ಟು ವರ್ಷ ಇರಬಹುದು.

ಇಂದು ಹರಿಹಂಚಾಗಿರುವ ದಲಿತ ನಾಯಕತ್ವ, ಅದರೊಳಗಿನ ಒಡಕುಗಳು, ಅದರ ಲಾಭ ಪಡೆಯುತ್ತಿರುವ ಹಿಂದುತ್ವ ನಾಯಕತ್ವ ಎಲ್ಲಾ ನೋಡಿದರೆ, ಬಿದಿರು ಬೆಳೆದು ಅಳಿದ ಹಾಗೆ ಈ ಚಳವಳಿಗಳು ಅನ್ನಿಸುತ್ತೆ. ಮತ್ತೆ ಮತ್ತೆ ಹುಟ್ಟಿ ಬೆಳೆಯುವುದು, ಮಾಸಿ ಹೋಗುವುದು. ನೆನಪುಗಳನ್ನು ಕೆದಕಿ ಮತ್ತೆ ಗಟ್ಟಿಗೊಳಿಸಲು ನೋಡುವುದು ಇದು ಪ್ರತೀ ತಲೆಮಾರಿನ ಭಾರ.

ಈಗ ಇದನ್ನು ನೆನಪಿಸಿಕೊಳ್ಳುವುದು ಹೆಚ್ಚು ಆಪ್ತ ಅನ್ನಿಸಿದೆ. ದಲಿತ ಚಳವಳಿಯಷ್ಟೇ ಅಲ್ಲ; ಇತರ ಚಳವಳಿಗಳು ತಮ್ಮವರೆನ್ನಿಸಿಕೊಂಡವರೊಂದಿಗೆ ನಿಷ್ಠುರ ಸಂಬಂಧವನ್ನೂ ಸಾಧಿಸಲಾಗದೇ ಹೋಗಿದ್ದಾರೆ. ಪಕ್ಷ ರಾಜಕೀಯದ ದೊಂಬರಾಟದಲ್ಲಿ ಅತ್ತಿಂದಿತ್ತ ಜಿಗಿಯುವ ನಾಯಕರ ಕಂಡು ದಿಗ್ಭ್ರಮೆಗೊಳ್ಳುವ ಸಾದಾ ಹಿಂಬಾಲಕರ ದುಗುಡಗಳೆಲ್ಲಾ ಚಳವಳಿಯ ವೇಗ ಕಸಿದುಕೊಳ್ಳುವುದನ್ನು ನೋಡುತ್ತಿದ್ದೇವೆ.

ಮತ್ತೆ ಇಂಥಾ ತೀವ್ರ ಆತ್ಮ ವಿಮರ್ಶೆಯ ದಿನಗಳು ಮರುಕಳಿಸಿದರಷ್ಟೇ ಹೊಸ ತಲೆಮಾರು ಹೋರಾಟದ ಹೆಜ್ಜೆ –ಹಾದಿ ಬಗ್ಗೆ ಸ್ಪಷ್ಟತೆ ಪಡೆಯಬಹುದೇನೋ. ನನ್ನಂತವರು ಈಗಲೂ ದಿಕ್ಕೆಡದೇ, ಹುಂಬ ಆತ್ಮವಿಶ್ವಾಸನ್ನೂ ತೋರದೇ ಆ ಧೀರೋದಾತ್ತ ಚಳವಳಿಯ ಭಾಗವಾಗಲು ಕಾಯುತ್ತಿದ್ದೇವೆ. ವಯಸ್ಸು ಎಂಬುದು ಒಂದು ಸಂಖ್ಯೆ ಅಷೆಬಾಬಾಸಾಹೇಬರ ಪರಿನಿರ್ವಾಣದ ದಿನ ಕಳೆಯಿತು. ಈ ಅರುವತ್ತು ವರ್ಷದಲ್ಲಿ ಅವರಿಲ್ಲದ ಅನಾಥ ಪ್ರಜ್ಞೆಯಿಂದಾಚೆ ಹೊಸ ದಿಗಂತದ ಕಡೆ ಹೆಜ್ಜೆ ಇಡಬೇಕಲ್ಲ. ಒಬ್ಬೊಬ್ಬರು ಒಂದೊಂದು ತಂಗುದಾಣ ಅರಸಿ ವಿಶ್ರಮಿಸಿಕೊಳ್ಳುತ್ತಿರುವ ಕಾಲದಲ್ಲಿ ನಾವಿದ್ದೇವಾ?

**(ಈ ಲೇಖನ ಕೆಲವು ವರ್ಷ ಮೊದಲು ಆಂದೋಲನದಲ್ಲಿ ಪ್ರಕಟವಾಯಿತು. 70–80ರ ಚಳವಳಿಯ ಕಾವಿನ ನೆನಪುಗಳ ಮಾಲಿಕೆಯಲ್ಲಿ ಇದೂ ಒಂದು.)**

# ಗ್ರಾಮೀಣ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ತುಂಬಿ ಬೋಧಿಸಿದರೆ ಮಾತ್ರ ಶಿಕ್ಷಣದ ಪ್ರಗತಿ ಸಾಧನೆ: ಎಂ.ಎಸ್.ನಟರಾಜು.

» **ಚಳ್ಳಕೆರೆ**

ಗ್ರಾಮೀಣ ಶಾಲೆಗಳಲ್ಲಿ ವಿದ್ಯಾರ್ಥಿಗಳು ಶಿಕ್ಷಣದ ಬಗ್ಗೆ ಹೆಚ್ಚು ಆಸಕ್ತಿಯನ್ನು ಮೂಡಿಸುವಂತೆ ಮಾಡುವಲ್ಲಿ ಶಿಕ್ಷಕರು ಹೆಚ್ಚು ಗಮನಹರಿಸಬೇಕು. ಶಾಲೆಯ ಪ್ರತಿಯೊಂದು ಚಟುವಟಿಕೆಯಲ್ಲೂ ವಿದ್ಯಾರ್ಥಿಗಳ ಹಾಜರಾತಿಯನ್ನು ಕಡ್ಡಾಯಗೊಳಿಸಬೇಕು. ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿದರೆ ಮಾತ್ರ ಅವರು ಓದುವದರ ಜೊತೆಗೆ ಇತರೆ ಚಟುವಟಿಕೆಗಳಲ್ಲೂ ಸಹ ಕ್ರಿಯಾಶೀಲರಾಗುತ್ತಾರೆ ಎಂದು ತಾಲ್ಲೂಕಿನ ತಳಕು ಹೋಬಳಿಯ ಹೊಸಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನಿರ್ಗಮನ ಮುಖ್ಯ ಶಿಕ್ಷಕ ಎಂ.ಎಸ್.ನಟರಾಜು ತಿಳಿಸಿದರು. ಅವರು, ತಮ್ಮ ಸೇವಾ ಅವಧಿಯನ್ನು ಪೂರ್ಣಗೊಳಿಸಿ ಮಂಗಳವಾರ ಸೇವೆಯಿಂದ ನಿವೃತ್ತರಾದ ಹಿನ್ನೆಲೆಯಲ್ಲಿ ಶಾಲೆಯ ಶಿಕ್ಷಕರ ವೃಂದ ಅವರನ್ನು ಬೀಳ್ಕೊಡುವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು. ರಜೆ ಇದ್ದರೂ ಸಹ ಶಿಕ್ಷಕರು ಅಭಿಮಾನವಿಟ್ಟು ಈ ಬೀಳ್ಕೊಡಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಕ್ಕೆ ಅಭಿನಂದನೆ ತಿಳಿಸಿದರು. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಕರ ಲಭ್ಯವಾಗುತ್ತಿರುವ ಬಗ್ಗೆ ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಬೇಕು ಎಂದರು. ಶಿಕ್ಷಕರ ಪರವಾಗಿ ಮಾತನಾಡಿದ ರಾಜ್ಯಪ್ರಶಸ್ತಿ ವಿಜೇತ ಶಿಕ್ಷಕ ಕೆ.ಎಸ್.ಶ್ರೀಕಾಂತ್,ಇಂದುಸೇವೆಯಿಂದನಿವೃತ್ತರಾಗುತ್ತಿರುವ ಎಂ.ಎಸ್.ನಟರಾಜು ಶಿಕ್ಷಣ ಇಲಾಖೆ ಆಸ್ತಿ. ಸುಮಾರು 29 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ವಿವಿಧ ಶಾಲೆಗಳಲ್ಲಿ ಕಾರ್ಯನಿರ್ವಹಿಸಿ ಶಾಲೆಯ ಪ್ರಗತಿಗೆ ಶ್ರಮಿಸಿದ್ದಾರೆ. ನಮ್ಮ ಶಾಲೆಯಲ್ಲೂ ಎರಡೂ ವರ್ಷಗಳಿಂದ ಮುಖ್ಯ ಶಿಕ್ಷಕರಾಗಿ ಉತ್ತಮ ಕಾರ್ಯಚಟುವಟಿಕೆಯಿಂದ ಎಲ್ಲರ ವಿಶ್ವಾಸಕ್ಕೆ ಪಾತ್ರರಾಗಿದ್ದರು ಎಂದರು. ಶಿಕ್ಷಕ ಜಿ.ಟಿ.ಮಲ್ಲಿಕಾರ್ಜುನ, ರಾಜೇಶ್ವರಿ, ನಂದೀಶ್, ಪಿ.ವಿಜಯ್, ಚಿಟ್ಟಿಬಾಬು, ಮಂಜಣ್ಣ, ಬಿ.ಸಿ.ಮಂಜುಳಾ, ಗಾಯಿತ್ರಿದೇವಿ, ನಸ್ರತ್‌ಉನ್ನೀಸಾ ಮುಂತಾದವರು ಭಾಗವಹಿಸಿದ್ದರು.



ಚಳ್ಳಕೆರೆ ತಾಲ್ಲೂಕಿನ ತಳಕು ಹೋಬಳಿಯ ಹೊಸಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಎಂ.ಎಸ್.ನಟರಾಜುರವರಿಗೆ ವಯೋನಿವೃತ್ತಿ ಹಿನ್ನೆಲೆಯಲ್ಲಿ ಸನ್ಮಾನಿಸಿ ಬೀಳ್ಕೊಡಲಾಯಿತು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T